ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಫೆಬ್ರವರಿ 24, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 283 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಕೃಷಿಯಲ್ಲಿದ್ದವರಿಗೆ ಮಾತ್ರ ನೀರು

ಬೆಂಗಳೂರು, ಫೆ. 23 - ಜಮೀನಿದ್ದು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವವರಿಗೆ ಮಾತ್ರ ನೀರು ಒದಗಿಸುವ ಹೊಸ ಯೋಜನೆಯನ್ನು ಜಾರಿಗೊಳಿಸುವುದಾಗಿ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ವಿಧಾನ ಪರಿಷತ್ತನಲ್ಲಿಂದು ಘೋಷಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಹಲವು ಸದಸ್ಯರ ಪ್ರಸ್ತಾವಗಳಿಗೆ ಉತ್ತರಿಸಿದ ಸಚಿವರು, ಮಧ್ಯ ಪ್ರದೇಶ ಸರ್ಕಾರ ಜಾರಿಗೆ ತಂದಿರುವ ಹನಿ ನೀರಾವರಿ ಯೋಜನೆಯನ್ನು ಕರ್ನಾಟಕದಲ್ಲೂ ಅನುಷ್ಠಾನಗೊಳಿಸಲಾಗುವುದು ಎಂದರು. ನದಿ, ಕೆರೆ ಮೂಲಗಳಿಂದ ಜಮೀನುಗಳಿಗೆ ನೀರು ಹರಿಸಲಾಗುತ್ತದೆ. ಕೃಷಿಕರು ಇದನ್ನು ಸಮರ್ಪಕವಾಗಿ (2ನೇ ಪುಟಕ್ಕೆ)

## ವಿದ್ಯುತ್ ಸಂಪರ್ಕ, ಸೌರ ವಿದ್ಯುತ್ ನಿಯಮಗಳ ಸಡಿಲಿಕೆ

ನವದೆಹಲಿ, ಫೆ. 23 - ವಿದ್ಯುತ್ ಸಂಪರ್ಕ ಪಡೆಯುವುದನ್ನು ಸುಲಭಗೊಳಿಸಲು ಕೇಂದ್ರ ಸರ್ಕಾರ ನಿಯಮಗಳನ್ನು ಸಡಿಲಿಸಿದೆ. ಇದರ ಅನ್ವಯ ಮಹಾನಗರಗಳಲ್ಲಿ ಅರ್ಜಿ ಬಂದ ಮೂರು ದಿನಗಳಲ್ಲೇ ಸಂಪರ್ಕ ಕಲ್ಪಿಸಲಾಗುವುದು.

ನಗರಪಾಲಿಕೆಗಳಲ್ಲಿ ಈ ಅವಧಿ ಏಳು ದಿನ ಹಾಗೂ ಗ್ರಾಮೀಣ ಭಾಗಗಳಲ್ಲಿ 15 ದಿನ ಆಗಲಿದೆ. ಈ ಬದಲಾವಣೆಗಾಗಿ ಕೇಂದ್ರ ಸರ್ಕಾರ ವಿದ್ಯುತ್ (ಗ್ರಾಹಕರ ಹಕ್ಕು) ನಿಯಮ 2020ಕ್ಕೆ ತಿದ್ದುಪಡಿ ತಂದಿದೆ.

ಮನೆಗಳ ಮೇಲೆ ಸೌರ ಘಟಕಗಳನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯನ್ನೂ ಸರಳಗೊಳಿಸಲಾಗಿದೆ. ಬಹುಮಹಡಿ ಕಟ್ಟಡಗಳಲ್ಲಿ ಇರುವವರು ತಮಗೆ ಬೇಕಾದ (2ನೇ ಪುಟಕ್ಕೆ)

# ನಾಲೆಗೆ ನೀರು: ಅವೈಜ್ಞಾನಿಕ ವೇಳಪಟ್ಟಿ ರದ್ದುಗೊಳಿಸಿ

## ಕಾರಿಗನೂರು ಕ್ರಾಸ್‌ನಲ್ಲಿ ರಾಜ್ಯ ಹೆದ್ದಾರಿ ತಡೆ ನಡೆಸಿ ಒತ್ತಾಯಿಸಿದ ರೈತರು

ದಾವಣಗೆರೆ, ಮಾ.23- ಭದ್ರಾ ನಾಲೆಯಲ್ಲಿ ನೀರು ಹರಿಸುವ ವೇಳಾಪಟ್ಟಿ ಅವೈಜ್ಞಾನಿಕವಾಗಿದ್ದು, ವೇಳಾಪಟ್ಟಿಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಕಬ್ಬು ಬೆಳೆಗಾರರ ಸಂಘ ಮತ್ತು ರೈತರ ಒಕ್ಕೂಟದಿಂದ ಶುಕ್ರವಾರ ಕಾರಿಗನೂರು ಕ್ರಾಸ್‌ನಲ್ಲಿನ ಜೆ. ಹೆಚ್. ಪಟೇಲ್ ವೃತ್ತದಲ್ಲಿ ದಾವಣಗೆರೆ-ಚೆನ್ನಗಿರಿ ರಾಜ್ಯ ಹೆದ್ದಾರಿ ತಡೆದು ಪ್ರತಿಭಟಿಸಲಾಯಿತು.

ರೈತ ಮುಖಂಡ ತೇಜಸ್ವಿ ಪಟೇಲ್, ಕೊಳೇನಹಳ್ಳಿ ಬಿ.ಎಂ. ಸತೀಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ಭದ್ರಾ ನೀರು ಹರಿಸಿ ವಾರವಾದರೂ ಕೊನೆ ಭಾಗಕ್ಕೆ ನೀರು ತಲುಪಿಲ್ಲ. ಕೇವಲ 12 ದಿನ ನೀರು ಬಿಡುವ ಅವೈಜ್ಞಾನಿಕ ವೇಳಾಪಟ್ಟಿ ರದ್ದುಗೊಳಿಸಬೇಕು. 20 ದಿನ ನೀರು ಹರಿಸಿ, 20 ದಿನ ನೀರು ನಿಲ್ಲಿಸುವ ವೇಳಾಪಟ್ಟಿ ಜಾರಿ ಮಾಡಬೇಕು ಎಂದು ಆಗ್ರಹಿಸಲಾಯಿತು.

ಇದೇ ವೇಳೆ ಸ್ಥಳಕ್ಕೆ ಆಗಮಿಸಿದ ಉಪವಿಭಾಗಾಧಿಕಾರಿ ದುರ್ಗಾಶ್ರೀ ಮತ್ತು (4ನೇ ಪುಟಕ್ಕೆ)

## ಕಾರ್ಮಿಕರಾಗಿ ಸಿರಿವಂತರೂ ಸೇರ್ಪಡೆ

ಬೆಂಗಳೂರು, ಫೆ. 23 - ಫೆರಾರಿ ಕಾರು ಹೊಂದಿರುವವರು, ಜಿಎಸ್ಟಿ ಪಾವತಿಸುವವರು, ಜಮೀನುದಾರರು ಸೇರಿದಂತೆ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರೇ ಕಾರ್ಮಿಕ ಇಲಾಖೆಯಲ್ಲಿ ತಮ್ಮ ಹೆಸರುಗಳನ್ನು ನೋಂದಣಿ ಮಾಡಿಕೊಂಡಿದ್ದಾರೆಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಬಹಿರಂಗಪಡಿಸಿದ್ದಾರೆ.

ವಿಧಾನ ಪರಿಷತ್‌ನ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಕಾರ್ಮಿಕ ಇಲಾಖೆಯಡಿ ಹೆಚ್ಚಿನ ಸವಲತ್ತುಗಳು ಸಿಗುತ್ತಿರುವ (4ನೇ ಪುಟಕ್ಕೆ)

### ಕೆ.ಬೇವಿನಹಳ್ಳಿ ಗ್ರಾಮದ ಎ.ವಿ. ಕೊಟ್ರೇಶಪ್ಪ ನಿಧನ



ಹರಿಹರ ತಾಲ್ಲೂಕು
ಕೆ.ಬೇವಿನಹಳ್ಳಿ ಗ್ರಾಮದ
ವೀರಬಸಪ್ಪನವರ ಪುತ್ರ

**ಎ.ವಿ. ಕೊಟ್ರೇಶಪ್ಪ**

(80 ವರ್ಷ)

ಇವರು ದಿನಾಂಕ 23.02.2024ರ ಶುಕ್ರವಾರ ಸಂಜೆ 5.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.02.2024ರ ಶನಿವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮವಾದ ಹರಿಹರ ತಾಲ್ಲೂಕು ಕೆ.ಬೇವಿನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು :** ಧರ್ಮಪತ್ನಿ ಶ್ರೀಮತಿ ಅಂಗಡಿ ಹಾಲಮ್ಮ ಮಕ್ಕಳಾದ ಎ. ಗುರುಬಸವರಾಜ, ಬಿ.ಎ. ರುದ್ರುಮುನಿ, ಮಗಳು ರೇಣುಕಮ್ಮ ಮತ್ತು ಸಹೋದರರು, ಅಳಿಯಂದಿರು, ಮೊಮ್ಮಕ್ಕಳು, ಅಂಗಡಿ ಸಹೋದರರು ಕೆ.ಬೇವಿನಹಳ್ಳಿ ಹಾಗೂ ಬಂಧು ಮಿತ್ರರು.

॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

### ಎಂಟನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಕೆ.ಎನ್. ಗುರುಶಾಂತಮ್ಮನವರು**

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ....

- ಸುಲ್ತಾನಿಪುರದ ಎಸ್.ಜಿ. ದೇವೇಂದ್ರಪ್ಪ ಮತ್ತು ಮಕ್ಕಳು ಸೊಸೆಯಂದಿರು ಹಾಗೂ ಮೊಮ್ಮಕ್ಕಳು
- ಸುಲ್ತಾನಿಪುರ ಶ್ರೀಮತಿ ರತ್ನಮ್ಮ, ಶ್ರೀ ಜಿ.ಎನ್. ಕುಬೇರಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
- ಶ್ರೀಮತಿ ವನಜಾಕ್ಷಮ್ಮ, ಶ್ರೀ ಆರ್. ಲೋಕೇಶ್ವರಪ್ಪ ಮತ್ತು ಮಕ್ಕಳು, ಚಿಕ್ಕವ್ವನಾಗ್ತಿಹಳ್ಳಿ.
- ಶ್ರೀಮತಿ ಮನೋಹರಿ, ಶ್ರೀ ಎಂ.ಎನ್. ಶಿವನಾಗಪ್ಪ ಮತ್ತು ಮಕ್ಕಳು, ಬೆಳವನೂರು.
- ಶ್ರೀಮತಿ ಲತಾ, ಶ್ರೀ ಆರ್. ಬಸವರಾಜಪ್ಪ, ಶಿಕ್ಷಕರು ಮತ್ತು ಮಕ್ಕಳು, ಈಚಘಟ್ಟ.
- ಶ್ರೀಮತಿ ಅಕ್ಕಮ್ಮ, ಶ್ರೀ ಕೆ.ಎನ್. ಶಿವಕುಮಾರ್ ಮತ್ತು ಮಕ್ಕಳು, ಗೋಪನಾಳು.
- ಮೆ॥ ಜಿ.ಕೆ. ಎಂಟರ್‌ಪ್ರೈಸಸ್, ಎಪಿಎಂಸಿ ಯಾರ್ಡ್, ಎ ಬ್ಲಾಕ್, ದಾವಣಗೆರೆ.

ಮೊ. : 93410 04946, 70195 02899

### ಹುಲಿಯಪ್ಪಗೌಡ ಹೆಚ್. ಪಾಟೀಲ್ ನಿಧನ



ದಾವಣಗೆರೆ ಭಗತ್‌ಸಿಂಗ್ ನಗರ, 11ನೇ ಮೇನ್, 10ನೇ ಕ್ರಾಸ್ ವಾಸಿ
ನಿವೃತ್ತ ಪಿಡಿಓ, ಹುಚ್ಚವ್ವನಹಳ್ಳಿ

**ಹುಲಿಯಪ್ಪಗೌಡ ಹೆಚ್. ಪಾಟೀಲ್**

ಇವರು, ದಿನಾಂಕ 23-02-2024ರ ಶುಕ್ರವಾರ ಮಧಾಹ್ನ 2 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24-02-2024ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಇಂಡಸ್ಟ್ರೀಯಲ್ ಏರಿಯಾದಲ್ಲಿರುವ ರಾಮನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ : VHP ಟ್ರೇಡರ್ಸ್, ದಾವಣಗೆರೆ.**
**ಮೊ : 99008 80433 / 98446 64488**









# ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ಅಜ್ಜ - ಅಜ್ಜಿಯಂದಿರ ದಿನಾಚರಣೆ



ದಾವಣಗೆರೆ, ಫೆ.23- ನಗರದ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ನಿನ್ನೆ ಅಜ್ಜ - ಅಜ್ಜಿಯಂದಿರ ದಿನಾಚರಣೆ ನಡೆಯಿತು.

ಶ್ರೀಮತಿ ನಾನ್ಸಿ ಫರ್ನಾಂಡಿಸ್ ಮತ್ತು ಲಾರೆನ್ಸ್ ಗೇಮ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಪ್ರಾಂಶುಪಾಲರಾದ ಜೈರಾಮ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಿವಿಧ ಸಾಂಸ್ಕೃತಿಕ ಮನೋರಂಜನೆ ಕಾರ್ಯಕ್ರಮಗಳ ನಂತರ ಅಜ್ಜ - ಅಜ್ಜಿಯಂದಿರಿಗಾಗಿಯೇ ಆಟೋಟಗಳನ್ನು ಆಯೋಜಿಸಲಾಗಿತ್ತು.

ಶಿಕ್ಷಕ ವೀರಭದ್ರ ನಾಯಕ್ ಅವರುಗಳು ಉಪಸ್ಥಿತರಿದ್ದರು. ಶಿಕ್ಷಕ ಉಪೇಂದ್ರ ಕುಮಾರ್ ವಂದಿಸಿದರು. ಚೇತನ ಅವರು ಸರಸ್ವತಿ ವಂದನ ಗೀತೆ ಹಾಡಿದರು. ಶ್ರೀಮತಿ ಮೋಸಮಿ, ಪ್ರೀತಿ ಕುಮಾರಿ ಅವರುಗಳು ನಿರೂಪಿಸಿದರು.

## ಹರಪನಹಳ್ಳಿಯಲ್ಲಿ ಇಂದು ಕಾಂಗ್ರೆಸ್ ಅಧ್ಯಕ್ಷರ ಪದಗ್ರಹಣ

ಹಳೇ ಬಸ್ ನಿಲ್ದಾಣದಲ್ಲಿ ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳ ಪದಗ್ರಹಣ ಕಾರ್ಯಕ್ರಮ ಇಂದು ಬೆಳಿಗ್ಗೆ 11 ಗಂಟೆಗೆ ಜರುಗಲಿದೆ. ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಎಂ.ವಿ.ಅಂಜಿನಪ್ಪ ಹಾಗೂ ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಮೈದೂರು ಕೆ.ಕುಬೇರಪ್ಪ ಅವರನ್ನು ಕೆಪಿಸಿಸಿ ಅಧ್ಯಕ್ಷರು ನೇಮಕ ಮಾಡಿ ಈಚೆಗೆ ಆದೇಶ ಹೊರಡಿಸಿದ್ದರು. ಈರ್ವರ ಪದಗ್ರಹಣ ಕಾರ್ಯಕ್ರಮ ದಲ್ಲಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್, ವಿಜಯನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಿರಾಜ್ ಶೇಖ್, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಮಂಜಪ್ಪ ಮತ್ತು ಇತರರು ಪಾಲ್ಗೊಳ್ಳುವರು.

# 'ಬಲಿ' ಪದ್ದತಿಯಿಂದ ಮುಕ್ತರಾದಾಗ ಮಾತ್ರ ಆರ್ಥಿಕ ಸದೃಢತೆ



**ಬೆಳ್ಳೂಡಿ ಶ್ರೀ ಉಡಸಲಾಂಬಿಕಾ ದೇವಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಶ್ರೀ ನಿರಂಜನಾನಂದಪುರಿ ಶ್ರೀಗಳು**

ಹರಿಹರ, ಫೆ. 23- ದೇವರು ಮತ್ತು ದೈವದ ಹೆಸರಿನಲ್ಲಿ ಕುರಿ ಮತ್ತು ಕೋಳಿ ಬಲಿ ಕೊಡುವ ಪದ್ಧತಿಯಿಂದ ಮುಕ್ತರಾದಾಗ ಮಾತ್ರ ಸುಭಿಕ್ಷೆ ಮತ್ತು ಸುಂದರ ಸಮಾಜ ಕಟ್ಟುವುದರ ಜೊತೆಗೆ ಆರ್ಥಿಕವಾಗಿ ಸದೃಢರಾಗಲು ಸಾಧ್ಯವಿದೆ ಎಂದು ಕಾಗಿನೆಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ಬೆಳ್ಳೂಡಿ ಗ್ರಾಮದಲ್ಲಿ ಶ್ರೀ ಉಡಸಲಾಂಬಿಕಾ ದೇವಿ ದೇವಸ್ಥಾನದಲ್ಲಿ ಇಂದು ಏರ್ಪಾಡಾಗಿದ್ದ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭವನ್ನು ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಸಾಲ ಮಾಡಿ ಕುರಿ, ಕೋಳಿ ಬಲಿ ಕೊಟ್ಟು ಹಬ್ಬದ ಆಚರಣೆ ಮಾಡಿ ಎಂದು ಯಾವ ದೇವರು ಕೂಡ ಅಭಿಲಾಷೆ ಹೊಂದಿರುವುದಿಲ್ಲ. ಅಂತಹ ದೇವರು ಕೂಡ ನಮ್ಮ ದೇವರಲ್ಲ. ಜನರು ಹಬ್ಬವನ್ನು ಮಾಡಬೇಡಿ ಎಂದು ನಾವು ಹೇಳುತ್ತಿಲ್ಲ, ಮಾಂಸ ತಿನ್ನಬೇಡಿ ಎಂದು ಹೇಳುತ್ತಿಲ್ಲ. ಮಾಂಸ ಸೇವನೆ ಒಂದು ಆಹಾರ ಪದ್ಧತಿಯಾಗಿದೆ. ಆದರೆ ಮೌಢ್ಯಗಳಿಂದ ಕೂಡಿದ ಹಬ್ಬದ ಆಚರಣೆಯಿಂದ, ಸಾಲವನ್ನು ಮಾಡಿ ಅಧಃಪತನಕ್ಕೆ ಹೋಗದೆ, ಹೋಳಿಗೆ, ಕಡುಬು ತಿಂದುಕೊಂಡು ಹಬ್ಬದ ಆಚರಣೆ ಮಾಡಿದಾಗ ಸಾಲದ ಹೊರೆಯಿಲ್ಲದ ಜೀವನವನ್ನು ನಡೆಸಬಹುದು ಎಂದರು.

ಪಕ್ಕದ ಗೋವಿನಾಳು ಮತ್ತು ಶಿಕಾರಿಪುರದ ಮಟ್ಟಿಕೋಟೆ ಗ್ರಾಮದಲ್ಲಿ ಬಲಿ ಕೊಡುವ ಹಬ್ಬಗಳನ್ನು ನಿಷೇಧ ಮಾಡಿ, ಅಲ್ಲಿನ ಜನರು ಸುಭಿಕ್ಷವಾಗಿ ಇದ್ದಾರೆ. ಹಾಗೆ ಇಲ್ಲಿನ ಗ್ರಾಮಸ್ಥರು ಕೂಡ ಚಿಂತನೆ ಮಾಡಬೇಕು.

ಶೋಷಿತ ಸಮುದಾಯದ ಜನರು ಮೌಢ್ಯತೆಯಿಂದ ಹೊರ ಬಂದು ಕುರಿ, ಕೋಳಿ ಬಲಿ ಕೊಡುವ ಪದ್ಧತಿಗೆ ತಿಲಾಂಜಲಿ ಹಾಡುವಂತೆ ಆಗಬೇಕು. ಈ ಬಗ್ಗೆ ಹೆಚ್ಚು ಚಿಂತೆ ಮಾಡಬೇಕು. ಆಗ ಗ್ರಾಮದಲ್ಲಿ ಬಡ ಜನರು ಸುಂದರ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿದೆ ಎಂದು ಹೇಳಿದರು.

ಶ್ರೀ ಬಸವಪ್ರಭು ಮಡಿವಾಳ ಮಾಚಿದೇವ ಸ್ವಾಮೀಜಿ ಮಾತನಾಡಿ, ದೇವಸ್ಥಾನ ಮತ್ತು ದೇವರು ಎಂಬುದು ಧರ್ಮದ ಜಾಗೃತಿಯ ಸಂಕೇತವಾಗಿದೆ. ದೇವಸ್ಥಾನ ನಿರ್ಮಾಣ ಮಾಡುವುದರಿಂದ ದೈವಿಕ ಶಕ್ತಿ ಮತ್ತು ಮಾನಸಿಕ ಶಕ್ತಿ ಉಂಟಾಗುತ್ತದೆ. ದೈವಿಕ ಶಕ್ತಿ ಹುಟ್ಟುತ್ತಲೇ ಬರುತ್ತದೆ ಆದರೆ ಮಾನಸಿಕ ಶಕ್ತಿ ಅನುಭವದ ಅಡಿಯಲ್ಲಿ ಬರುತ್ತದೆ. ಮಾಟ-ಮಂತ್ರ ಮತ್ತು ಮೌಢ್ಯಗಳನ್ನು ನಂಬುವುದರ ಬದಲಿಗೆ ಸಾಕ್ಷರತೆಯ ಕಡೆಗೆ ಎಲ್ಲರೂ ಮುಂದಾಗಬೇಕಿದೆ ಎಂದು ಹೇಳಿದರು.

ವಿಶ್ವಬಂಧು ಕೋ - ಆಪರೇಟಿವ್ ಸೊಸೈಟಿ ಅಧ್ಯಕ್ಷ ಬೆಳ್ಳೂಡಿ ಬಿ. ರಾಮಚಂದ್ರಪ್ಪ ಮಾತನಾಡಿ, ದೇವಸ್ಥಾನ ನಿರ್ಮಾಣ ಮಾಡಿದರೆ ಸಾಲದು, ಭಕ್ತರು ಕೂಡಾ ಸುಸಂಸ್ಕೃತರಾಗಬೇಕು ಎಂದು ಹೇಳಿದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಡಿ. ಕುಮಾರ್ ಮಾತನಾಡಿ, ಗ್ರಾಮದ ಜನರು ದೇವಸ್ಥಾನ ನಿರ್ಮಾಣದ ಬದಲಿಗೆ ಶಾಲೆಗಳನ್ನು ತೆರೆಯು ವುದಕ್ಕೆ ಮುಂದಾಗಬೇಕು ಎಂದು ಹೇಳಿದರು.

ಒಂದು ಗ್ರಾಮವು ಚೆನ್ನಾಗಿ ಇರಬೇಕಾದರೆ ದೇವಸ್ಥಾನ ಮತ್ತು ಶಾಲೆ ಎರಡೂ ಇರಬೇಕು. ಆಗ ಗ್ರಾಮದಲ್ಲಿ ಎಲ್ಲವೂ ಸುಸೂತ್ರವಾಗಿ ಸಾಗುತ್ತದೆ ಎಂದು ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಹೇಳಿದರು.

ಮಾಜಿ ಶಾಸಕ ಎಸ್. ರಾಮಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಜಿ.ಎಂ. ಅನಿತ್, ಜಿಲ್ಲಾ ಬಿಜೆಪಿ ಸಂಚಾಲಕ ಹನಗವಾಡಿ ಎಸ್.ಎಂ. ವೀರೇಶ್, ಗ್ರಾಪಂ ಅಧ್ಯಕ್ಷ ಉಮೇಶ್, ಉಪಾಧ್ಯಕ್ಷೆ ನೇತ್ರಾವತಿ ಎಕ್ಕೇಗೊಂದಿ, ಧರ್ಮಸ್ಥಳ ಸಂಘದ ಗಣಪತಿ ಮಾಳಂಜೆ, ದೇವಸ್ಥಾನ ಸಮಿತಿಯ ಮರುಳಸಿದ್ದಯ್ಯ, ಹನುಮಂತ ಗೌಡ್ರು, ಜಿ.ಎಸ್.ಸುದೀಪ್ ಗೌಡ್ರು, ಬಿ.ವೈ. ಭೀಮಪ್ಪ, ಬಾತಿ ಮಹೇಶ್ವರಪ್ಪ, ವಿರೂಪಾಕ್ಷಪ್ಪ, ಕೂಲಂಬಿ ರಮೇಶ್, ಬಿ. ಸಿದ್ದೇಶ್, ತಳವಾರ ಹನುಮಂತಪ್ಪ, ಬೆಳಗೇರಿ ಸುರೇಶ್, ಮಡಿವಾಳ ಅಜ್ಜಪ್ಪ, ಎಸ್.ಜಿ. ಸಿದ್ದೇಶಪ್ಪ, ವೆಂಕಟೇಶಪ್ಪ, ಜಿ.ಎಸ್. ಜಗದೀಶ್, ಪೂಜಾರ್ ಶಂಕ್ರಪ್ಪ, ಹರೀಶ್ ಇತರರು ಉಪಸ್ಥಿತರಿದ್ದರು.

# ಮಹಿಳೆಗೆ ಹುದ್ದೆಯಲ್ಲ, ಮನ್ನಣೆಯೇ ಸಬಲೀಕರಣ

**ತರಳಬಾಳು ಹುಣ್ಣಿಮೆಯಲ್ಲಿ ಪೊಲೀಸ್ ಅಧೀಕ್ಷಕಿ ಬಿ.ಟಿ. ಕವಿತ**

ಸಿರಿಗೆರೆ, ಫೆ. 23 – ಮಹಿಳೆಯರು ಉನ್ನತ ಸ್ಥಾನ ಅಲಂಕರಿಸುವುದಷ್ಟೇ ಸಬಲೀಕರಣವಲ್ಲ. ಮಹಿಳೆಯರ ಮಾತು ಹಾಗೂ ಅಭಿಪ್ರಾಯಗಳಿಗೆ ಮನೆಗಳಲ್ಲಿ ಮನ್ನಣೆ ಸಿಗುವುದೇ ನಿಜವಾದ ಸಬಲೀಕರಣ ಎಂದು ಮೈಸೂರು ಡಿ.ಸಿ.ಆರ್.ಇ. ಪೊಲೀಸ್ ಅಧೀಕ್ಷಕಿ ಬಿ.ಟಿ. ಕವಿತ ಅಭಿಪ್ರಾಯಪಟ್ಟರು.

ಚಿತ್ರದುರ್ಗ ಜಿಲ್ಲೆಯ ಸಿರಿಗೆರೆಯ ತರಳಬಾಳು ಮಠದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಎರಡನೇ ದಿನದಂದು ಮಹಿಳಾ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರತಿ ಮನೆಯಲ್ಲೂ ಮಹಿಳಾ ಸಬಲೀಕರಣ ಆಗಬೇಕಿದೆ. ಮಹಿಳೆಗೆ ತನ್ನ ಜೀವನಕ್ಕೆ ಸಂಬಂಧಿಸಿದ ಅಭಿಪ್ರಾಯ ಹಾಗೂ ನಿರ್ಧಾರ ಹೇಳಲು ಅವಕಾಶ ಇರಬೇಕು. ತನ್ನ ಕುಟುಂಬದ ಕ್ಷೇಮ ನೋಡಿಕೊಳ್ಳುವಷ್ಟು ಸಶಕ್ತಳಾಗಬೇಕು ಎಂದರು.

ಈ ರೀತಿಯ ಸಬಲೀಕರಣಕ್ಕಾಗಿ ಮಹಿಳೆಯರನ್ನು ಜಾಗೃತಗೊಳಿಸಬೇಕು. ಅಗತ್ಯ ಶಿಕ್ಷಣ ಹಾಗೂ ತರಬೇತಿ ಕೊಡಬೇಕು. ಅವರ ಹಕ್ಕುಗಳ ಬಗ್ಗೆ ತಿಳಿಸಬೇಕು ಎಂದು ಕವಿತ ತಿಳಿಸಿದರು.

ಮಹಿಳೆಯರಿಗೆ ಈಗ ಶಾಸನ ಸಭೆಗಳಲ್ಲೂ ಮೂರನೇ ಒಂದರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಈಗಾಗಲೇ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಇದೆ. ಆದರೆ, ಗಂಡಂದಿರೇ ಅಧಿಕಾರ ಚಲಾಯಿಸುತ್ತಾರೆ ಎಂಬ ಮಾತುಗಳೂ ಕೇಳಿ ಬರುತ್ತಿವೆ. ಮಹಿಳೆಗೆ ರಾಜಕೀಯ ಮೀಸಲಾತಿ ನೀಡಿರುವುದು ಆರಂಭಿಕ ಹಂತದಲ್ಲಿದೆ. ರಾಜಕೀಯವಾಗಿಯೂ ಸ್ವತಹ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಮಹಿಳೆಯಲ್ಲಿ ಇದೆ. ಮುಂದಿನ ದಿನಗಳಲ್ಲಿ ಆ ಶಕ್ತಿ ಕಂಡು ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಷ್ಟೋ ದುಡಿಯುವ ಮಹಿಳೆಯರು ತಾವು ಗಳಿಸಿದ ಹಣವನ್ನು ಮನೆಗೆ ಕೊಟ್ಟು, ಮತ್ತೆ ಮನೆಯವರಿಂದ ಕೈ ಖರ್ಚಿಗೆ ಕೇಳುವ ಪರಿಸ್ಥಿತಿ ಗಮನಿಸಿದ್ದೇನೆ. ಈ ವಿಷಯದಲ್ಲೂ ಜಾಗೃತಿ ಹೊಂದಬೇಕಿದೆ. ಮಹಿಳೆಯರು ಹಣಕಾಸಿನ ವಿಷಯದಲ್ಲಿ ಮನೆಯ ಯೋಗಕ್ಷೇಮಕ್ಕೇ ಆದ್ಯತೆ ಕೊಡುತ್ತಾರೆ ಎಂಬುದು ಎಲ್ಲರಿಗೂ ತಿಳಿದಿದೆ ಎಂದು ಕವಿತ ಹೇಳಿದರು.

ಮನುಷ್ಯ ಪ್ರಾಣಿಗಳಂತೆ ಇದ್ದಂತೇ ಇರುವುದಿಲ್ಲ. ಪ್ರಜ್ಞಾಪೂರ್ವಕವಾಗಿ ಕಲಿಯುವ ಸಾಮರ್ಥ್ಯ ಇದೆ. ಮಹಿಳೆಯರ ವಿಷಯದಲ್ಲೂ ಮನಸ್ಥಿತಿಯನ್ನು ವಿಕಾಸ ಮಾಡಿಕೊಳ್ಳಬೇಕಿದೆ. ಸಮಾನವಾಗಿ ಹಾಗೂ ಗೌರವದಿಂದ ಕಾಣುವುದನ್ನು ಕಲಿಯುವ ಸಾಧ್ಯತೆ ಇದೆ ಎಂದವರು ತಿಳಿಸಿದರು.

ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಹಂಪಿಯ ಶ್ರೀ ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮೀಜಿ ಉಪಸ್ಥಿತರಿದ್ದರು.

ವೇದಿಕೆಯ ಮೇಲೆ ಶಾಸಕ ಕೆ.ಎಸ್. ಬಸವಂತಪ್ಪ, ಶಾಸಕ ಎಂ.ಚಂದ್ರಪ್ಪ, ಮಾಜಿ ಶಾಸಕ ಹೆಚ್.ಆಂಜನೇಯ, ಚಿತ್ರದುರ್ಗ ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಮೈಸೂರಿನ ಕಬನಿ ಯೋಜನೆಯ ವಿಶೇಷ ಭೂಸ್ವಾಧೀನಾಧಿಕಾರಿ ಬಿ. ಸುಪ್ರಿಯ ಬಣಗಾರ್, ಎಸ್.ಎಸ್. ಕೇರ್ ಟ್ರಸ್ಟ್ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್, ಉದ್ಯಮಿ ಹನುಮಂತ ಚಂಚಲಿ, ಅಮೆರಿಕದ ಶಿಕಾಗೋದ ಅನುಸೂಯಮ್ಮ, ಬೇಲೂರಿನ ಸರ್ಕಾರಿ ಪಾಲಿಟೆಕ್ನಿಕ್ ಉಪನ್ಯಾಸಕಿ ನಾಗಶ್ರೀ ತ್ಯಾಗರಾಜ್, ದಾವಣಗೆರೆಯ ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ಸೂಕ್ಷ್ಮಾಣು ಜೀವಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಎಂ.ಜಿ. ಉಷಾ, ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ, ತ್ರಿಪುರಾದ ಐ.ಪಿ.ಎಸ್. ಅಧಿಕಾರಿ ಸುಧಾಂಬಿಕ, ಅಮೆರಿಕದ ಶಿಕಾಗೋದ ಅಣ್ಣಾಪುರ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

**ಗೂಳಿಗಳಾಗಬೇಡಿ, ಮಂಗಟ್ಟೆಗಳಾಗಿ**

ಉತ್ತರ ಭಾರತಕ್ಕೆ ಭೇಟಿ ನೀಡಿದಾಗ ಅಲ್ಲಿನ ಬೀದಿಗಳಲ್ಲಿ ಕೊಬ್ಬಿದ ಗೂಳಿಗಳು ರಸ್ತೆಯಲ್ಲಿ ಆರಾಮಾಗಿ ಮಲಗಿದ್ದು ಕಂಡು ಬಂತು. ಮತ್ತೊಂದೆಡೆ ಆಕಳುಗಳು ಮರಿಗಳ ಹೆತ್ತು ಹೊತ್ತು ಸಾಕುವ ಎಲ್ಲ ಜವಾಬ್ದಾರಿ ಹೊತ್ತಿದ್ದು ಕಂಡು ಬಂತು. ಇದನ್ನು ನೋಡಿದಾಗ ಪ್ರಕೃತಿಯೇ ಮಹಿಳೆಗೆ ಅನ್ಯಾಯ ಮಾಡಿದೆಯೇ? ಎಂಬ ಪ್ರಶ್ನೆಯೂ ಮೂಡಿತು ಎಂದು ಮೈಸೂರಿನ ಡಿ.ಸಿ.ಆರ್.ಇ. ಪೊಲೀಸ್ ಅಧೀಕ್ಷಕಿ ಬಿ.ಟಿ. ಕವಿತ ಹೇಳಿದರು.

ಮತ್ತೊಂದೆಡೆ ಮಂಗಟ್ಟೆ ಪಕ್ಷಿಗಳಲ್ಲಿ ಗಂಡು ಹೆಚ್ಚು ಕಷ್ಟಪಡುತ್ತದೆ. ಮೊಟ್ಟೆ ಇಡುವ ಹೆಣ್ಣು, ಮರಿಯಾಗುವವರೆಗೂ ಗೂಡು ಬಿಟ್ಟು ಹೊರ ಬರುವುದಿಲ್ಲ. ಅಲ್ಲಿಯವರೆಗೆ ಗಂಡು ಪಕ್ಷಿಯೇ ಹೆಣ್ಣಿಗೆ ಆಹಾರ ತಂದು ಕೊಡುತ್ತದೆ. ನಮ್ಮ ಸಮಾಜದ ಎಲ್ಲರಿಗೂ ಮಂಗಟ್ಟೆಯ ರೀತಿಯ ಮನೋಭಾವ ಬೇಕು ಎಂದವರು ಅಭಿಪ್ರಾಯ ಪಟ್ಟರು.

## ಎನ್‌ಪಿಸಿಐ ಮೂರನೇ ಪಾರ್ಟಿ ಆಪ್ ಆಗಲು ಪರಿಶೀಲನೆ

ಮುಂಬೈ, ಫೆ. 23 - ಪೇಟಿಎಂ ಆಪ್ ನಿರಂತರ ಪಾವತಿ ಕಾರ್ಯ ನಿರ್ವಹಣೆಗಾಗಿ ಎನ್.ಪಿ.ಸಿ.ಐ. ಅನ್ನು ಮೂರನೇ ಪಾರ್ಟಿಯ ಆ್ಯಪ್ ಆಗಿ ರೂಪಿಸುವ ಸಾಧ್ಯತೆ ಬಗ್ಗೆ ಪರಿಶೀಲಿ ಸಲು ರಿಸರ್ವ್ ಬ್ಯಾಂಕ್ ತಿಳಿಸಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಮಾರ್ಚ್ 15ರ ನಂತರ ಕಾರ್ಯ ನಿರ್ವಹಿಸುವುದರ ಮೇಲೆ ಹಲವಾರು ನಿರ್ಬಂಧಗಳನ್ನು ವಿಧಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪೇಟಿಎಂ ತನ್ನ ಗ್ರಾಹಕರಿಗೆ ಯು.ಪಿ.ಐ. ಮೂಲಕ ಹಣ ಪಾವತಿಯ ಸೇವೆ ಮುಂದು ವರೆಸುವ ಬಗ್ಗೆ ಪ್ರಶ್ನೆಗಳು ಉದ್ಭವಿಸಿವೆ.

ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್.ಪಿ.ಸಿ.ಐ.) ಮೂರನೇ ಪಾರ್ಟಿ ಆ್ಯಪ್ ಆಗುವ ಮೂಲಕ ಪೇಟಿಎಂಗೆ ಪಾವತಿ ನೆರವಾಗಲು ಪರಿಶೀಲಿಸುವಂತೆ ತಿಳಿಸಲಾಗಿದೆ.

## ಸಾದರ ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು

ದಾವಣಗೆರೆ, ಫೆ. 23- ಪ್ರಥಮ ವರ್ಷದ ವೈದ್ಯಕೀಯ ವಿದ್ಯಾಭ್ಯಾಸಿಗಳಾಗಿದ್ದು, ಸರ್ಕಾರಿ ಕೋಟಾದಲ್ಲಿ ಸ್ಥಾನ ಗಳಿಸಿ ವಿದ್ಯಾಭ್ಯಾಸ ಮಾಡುತ್ತಿರುವ ರಾಜ್ಯಮಟ್ಟದ ಸಾಧು ಲಿಂಗಾಯತ ಸಮಾಜದ ಆರ್ಥಿಕ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಐದು ವರ್ಷದ ಅಧ್ಯಯನದ ಅವಧಿಗೆ ಆರ್ಥಿಕ ನೆರವು ನೀಡಲು ಸಾದರ ನೌಕರರ ಬಳಗ ಮುಂದಾಗಿದೆ. ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಇದೇ ದಿನಾಂಕ 28 ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಕೆ. ನಾಗಪ್ಪ, ಅಧ್ಯಕ್ಷರು, ಸಾದರ ನೌಕರರ ಬಳಗ, ಸಾದರ ಪತ್ತಿನ ಸಹಕಾರ ಬ್ಯಾಂಕ್, 2 ನೇ ಮಹಡಿ, 2000/ಎ-28, 16 ನೇ ತಿರುವು, ತರಳಬಾಳು ಬಡಾವಣೆ, ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆ ಇವರಿಗೆ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ 7829043544, 9844501366, 9886339984, 9844369744.

## ಕದರಮಂಡಲಗಿಯಲ್ಲಿಂದು ಹೂವಿನ ತೇರು



ಬ್ಯಾಡಗಿ ತಾಲ್ಲೂಕಿನ ಮಹಾಕ್ಷೇತ್ರ ಕದರ ಮಂಡಲಗಿಯಲ್ಲಿ ಶ್ರೀ ಆಂಜನೇಯ (ಕಾಂತೇಶ) ಸ್ವಾಮಿಯ ಮಹಾರಥೋತ್ಸವವು ಇದೇ ದಿನಾಂಕ 26ರ ಸೋಮವಾರ ನಡೆಯಲಿದೆ. ಮಹಾರಥೋತ್ಸವದ ಪ್ರಯುಕ್ತ ಇಂದು ಹೂವಿನ ತೇರು, ನಾಳೆ ಭಾನುವಾರ ಮಹಾರಥಾರೋಹಣ ಜರುಗಲಿದ್ದು, ನಾಡಿದ್ದು ಸೋಮವಾರ ಮಹಾರಥೋತ್ಸವದ ನಂತರ ಓಕುಳಿ ಏರ್ಪಾಡಾಗಿದೆ.

## ದುಗ್ಗಮ್ಮನ ಜಾತ್ರೆ : ಇಂದು ಕುಸ್ತಿ ಸಭೆ



ದಾವಣಗೆರೆ : ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಪ್ರಯುಕ್ತ ಬರುವ ಮಾರ್ಚ್ 22, 23, 24ರಂದು 3 ದಿವಸಗಳ ಕಾಲ ಕುಸ್ತಿ ಪಂದ್ಯ ನಡೆಯಲಿದೆ. ಈ ಸಂಬಂಧ ಕುಸ್ತಿ ಕಮಿಟಿಯ ಅಧ್ಯಕ್ಷ ಹೆಚ್.ಬಿ. ಗೋಣೆಪ್ಪ ಅವರ ಅಧ್ಯಕ್ಷತೆಯಲ್ಲಿ ದೇವಸ್ಥಾನದ ಮುಂಭಾಗದಲ್ಲಿರುವ ಪ್ರಸಾದ ನಿಲಯದಲ್ಲಿ ಪೂರ್ವಭಾವಿ ಸಭೆಯನ್ನು ಇಂದು ಬೆಳಿಗ್ಗೆ 11.30ಕ್ಕೆ ಕರೆಯಲಾಗಿದೆ ಎಂದು ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಕುಸ್ತಿ ಸಮಿತಿ ಪರವಾಗಿ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಕೆ.ಬೇವಿನಹಳ್ಳಿ : ನೀರು ಬಳಕೆಗಾದರರ ಸಹಕಾರ ಸಂಘಕ್ಕೆ ಆಯ್ಕೆ



ಮಲೇಬೆನ್ನೂರು, ಫೆ.23- ಕೆ.ಬೇವಿನಹಳ್ಳಿ ಗ್ರಾಮದ ನೀರು ಬಳಕೆದಾರರ ಸಹಕಾರ ಸಂಘದ ಆಡಳಿತ ಮಂಡಳಿಗೆ ಇದೇ ದಿನಾಂಕ 16 ರಂದು ನಡೆದ ಚುನಾವಣೆಯಲ್ಲಿ 11 ಜನ ನಿರ್ದೇಶಕರುಗಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇಂದು ನಡೆದ ಸಂಘದ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿ.ಜಿ.ಮಲ್ಲಿಕಾರ್ಜುನಪ್ಪ ಮತ್ತು ಉಪಾಧ್ಯಕ್ಷರಾಗಿ ಡಿ.ರಾಜಶೇಖರಪ್ಪ ಅವರು ಅವಿರೋಧವಾಗಿ ಆಯ್ಕೆಯಾದರು.

ನಿರ್ದೇಶಕರಾದ ಜಿ.ಕೊಟ್ರಪ್ಪ, ಬಿ.ಎ.ರುದ್ರಮುನಿ, ಎ.ಎಸ್.ಗುರುರಾಜ್, ಶ್ರೀಮತಿ ರೇಣುಕಮ್ಮ ಕೊಟ್ರೇಶಪ್ಪ, ಎ.ವಿಶ್ವನಾಥ್, ಟಿ.ರೇವಣಸಿದ್ದಪ್ಪ, ಹೆಚ್. ಜಯಪ್ಪ, ಶ್ರೀಮತಿ ವೀರ ವೆಂಕಟಲಕ್ಷ್ಮಿ, ಸತ್ಯನಾರಾಯಣ ಮತ್ತು ಜಿ. ನಾಗೇಶ್ವರಾವ್ ಈ ವೇಳೆ ಹಾಜರಿದ್ದರು.

## ವಿದ್ಯುತ್ ಸಂಪರ್ಕ, ಸೌರ ವಿದ್ಯುತ್ ನಿಯಮಗಳ ಸಡಿಲಿಕೆ

**(1ನೇ ಪುಟದಿಂದ)** ರೀತಿಯ ಪ್ರತ್ಯೇಕ ಸಂಪರ್ಕ ಪಡೆಯಲೂ ಅವಕಾಶ ಕಲ್ಪಿಸಲಾಗಿದೆ. ವಿದ್ಯುತ್ ಬಳಕೆಯ ಬಗ್ಗೆ ಪರಿಶೀಲಿಸಲು ಗ್ರಾಹಕರು ದೂರು ನೀಡಿದ ಸಂದರ್ಭದಲ್ಲಿ, ವಿತರಣಾ ಕಂಪನಿಗಳ ಮೂಲಕ ಪರಿಶೀಲನೆಗೂ ಅವಕಾಶ ಕಲ್ಪಿಸಲಾಗಿದೆ ಎಂದು ಕೇಂದ್ರ ಇಂಧನ ಸಚಿವಾಲಯ ತಿಳಿಸಿದೆ. ಮನೆಗಳ ಮೇಲೆ 10 ಕೆ.ಡಬ್ಲ್ಯೂ. ಸಾಮರ್ಥ್ಯದವರೆಗೆ ವಿದ್ಯುತ್ ಘಟಕ ಅಳವಡಿಸಿಕೊಳ್ಳುವುದಕ್ಕೆ ಯಾವುದೇ ತಾಂತ್ರಿಕ ಸಾಧ್ಯತೆ ಅಧ್ಯಯನದ ಅಗತ್ಯವಿರುವುದಿಲ್ಲ.

ಅದಕ್ಕಿಂತ ಹೆಚ್ಚಿನ ಸಾಮರ್ಥ್ಯಕ್ಕಾಗಿ 15 ದಿನಗಳ ಒಳಗೆ ಪರಿಶೀಲನೆ ಪೂರೈಸಬೇಕಿದೆ. ಈ ಅವಧಿಯಲ್ಲಿ ಪರಿಶೀಲನೆ ಪೂರೈಸದೇ ಇದ್ದರೆ, ಅನುಮತಿ ದೊರೆತಿದೆ ಎಂದು ಭಾವಿಸಲಾಗುವುದು.

# ನೇಕಾರರ ಬೇಡಿಕೆ ಈಡೇರಿಕೆಗಾಗಿ ಪ್ರತಿಭಟನೆ

## ನೇಕಾರ ಅಭಿವೃದ್ಧಿ ನಿಗಮ ಕಾರ್ಯಾರಂಭಕ್ಕೆ ಒತ್ತಾಯ, ಸರ್ಕಾರಕ್ಕೆ ಮನವಿ ಸಲ್ಲಿಕೆ

ದಾವಣಗೆರೆ, ಮಾ.23- ನೇಕಾರ ಅಭಿವೃದ್ಧಿ ನಿಗಮ ಶೀಘ್ರ ಕಾರ್ಯಾರಂಭ ಮಾಡಲು ಕ್ರಮವಹಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ನೇತೃತ್ವದಲ್ಲಿ ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.



ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ನಂತರ ಉಪವಿಭಾಗಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ನಡೆಸಿ, ಉಪವಿಭಾಗಾಧಿಕಾರಿ ದುರ್ಗಶ್ರೀ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಒಕ್ಕೂಟದ ಗೌರವಾಧ್ಯಕ್ಷ ಡಿ. ಬಸವರಾಜ ಗುಬ್ಬಿ, ನೇಕಾರರ ಅಭಿವೃದ್ಧಿಗೆ ಸರ್ಕಾರ ಒಂದು ನೂರು ಕೋಟಿ ರೂ. ಮೀಸಲಿರಿಸಬೇಕು. ದಾವಣಗೆರೆಯಲ್ಲಿ ಜವಳಿ ಪಾರ್ಕ್ ನಿರ್ಮಿಸಬೇಕು. ರಾಜ್ಯದಲ್ಲಿ 60ಲಕ್ಷ ಜನಸಂಖ್ಯೆ ಇರುವ ನೇಕಾರರಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು. ಆತ್ಮಹತ್ಯೆ ಮಾಡಿಕೊಂಡ ನೇಕಾರರ ಕುಟುಂಬಗಳಿಗೆ ಶೀಘ್ರ ಪರಿಹಾರ ಧನ ನೀಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ನೇಕಾರ ಸಮುದಾಯ ಒಕ್ಕೂಟದ ಪ್ರಮುಖರಾದ ಶಿವಕುಮಾರ್ ಸುಹಾಪುರ್, ವೆಂಕಟೇಶ್ ಕೆ.ಎನ್., ಸೋಮಶೇಖರ್ ಯಡಳ್ಳಿ, ಕರಿಬಸಪ್ಪ ಐರಣಿ, ಹೆಚ್. ಪರಶುರಾಮ್ ನಂದಿಗಾವಿ ಇನ್ನಿತರರು ಪ್ರತಿಭಟನೆಯಲ್ಲಿದ್ದರು.

# ಕೃಷಿಯಲ್ಲಿದ್ದವರಿಗೆ ಮಾತ್ರ ನೀರು

**ಕೃಷಿ ಚಟುವಟಿಕೆಗೆ ರೈತರು ಡ್ರಿಪ್ ವ್ಯವಸ್ಥೆ ಮಾಡಿಕೊಂಡರೆ ಬಳಕೆಯಲ್ಲಿ ಶೇಕಡ 50ರಷ್ಟು ನೀರನ್ನು ಉಳಿಸಲು ಸಾಧ್ಯ. ಮಧ್ಯ ಪ್ರದೇಶ ಹಾಗೂ ರಾಜಸ್ಥಾನದ ಕೆಲವು ಭಾಗಗಳಲ್ಲಿ ಈ ಯೋಜನೆ ಯಶಸ್ವಿಯಾಗಿದೆ. ಕರ್ನಾಟಕದಲ್ಲೂ ಯೋಜನೆ ಜಾರಿ : ಡಿ.ಕೆ. ಶಿವಕುಮಾರ್**

**ರಾಜ್ಯ ಸರ್ಕಾರದಿಂದ ಹೊಸ ಯೋಜನೆ**

**(1ನೇ ಪುಟದಿಂದ)** ಬಳಕೆ ಮಾಡಿಕೊಳ್ಳದ್ದರಿಂದ ನೀರು ಪೋಲಾಗುತ್ತಿದೆ. ಇದನ್ನು ತಪ್ಪಿಸಲು ರೈತರ ಜಮೀನುಗಳಿಗೆ ನೇರವಾಗಿ ಕೊಳವೆಗಳನ್ನು ಅಳವಡಿಸಿ, ನೀರು ಪೂರೈಸಲಾಗುವುದು ಎಂದರು.

ಇಲಾಖೆ ಕೇವಲ ಜಮೀನಿನ ಒಂದು ಭಾಗಕ್ಕೆ ಕೊಳವೆ ಅಳವಡಿಕೆ ಮಾಡಲಿದೆ. ಕೃಷಿ ಮಾಡುವ ರೈತರು ಅಲ್ಲಿಂದ ತಮ್ಮ ಹೊಲಕ್ಕೆ ಡ್ರಿಪ್ ಯೋಜನೆ ಮೂಲಕ ಅಥವಾ ಕೊಳವೆಗಳನ್ನು ವಿಸ್ತರಿಸಿಕೊಂಡು ನೀರು ಪಡೆಯಬೇಕು. ಒಂದು ವೇಳೆ ರೈತ ತನ್ನ ಭೂಮಿಯಲ್ಲಿ ಆ ಸಾಲಿನಲ್ಲಿ ಬೆಳೆ ತೆಗೆಯದಿದ್ದರೆ ನೀರಿನ ಕೊಳವೆಯನ್ನು ಸ್ಥಗಿತಗೊಳಿಸಬೇಕು ಎಂದು ಸಚಿವರು ಹೇಳಿದರು.

ಎಲ್ಲ ತೆರನಾದ ಕೃಷಿ ಚಟುವಟಿಕೆಗೆ ರೈತರು ಡ್ರಿಪ್ ವ್ಯವಸ್ಥೆ ಮಾಡಿಕೊಂಡರೆ ಬಳಕೆಯಲ್ಲಿ ಶೇಕಡ 50ರಷ್ಟು ನೀರನ್ನು ಉಳಿಸಲು ಸಾಧ್ಯ. ಮಧ್ಯ ಪ್ರದೇಶ ಹಾಗೂ ರಾಜಸ್ತಾನದ ಕೆಲವು ಭಾಗಗಳಲ್ಲಿ ಈ ಯೋಜನೆ ಯಶಸ್ವಿಯಾಗಿದ್ದು, ತಾವೇ ಖುದ್ದಾಗಿ ಅಲ್ಲಿ ಅಧ್ಯಯನ ನಡೆಸಿ, ಕರ್ನಾಟಕದಲ್ಲೂ ಯೋಜನೆ ಜಾರಿ ಮಾಡುವುದಾಗಿ ತಿಳಿಸಿದರು. ಮುಂದಿನ ದಿನಗಳಲ್ಲಿ ನದಿ ಪಾತ್ರದಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಹೆಚ್ಚು ಒತ್ತು ನೀಡಲಾ ಗುವುದು. ಮಳೆಗಾಲದಲ್ಲೇ ಇಂತಹ ಕಾರ್ಯಕ್ರಮ ಕೈಗೆತ್ತಿ ಕೊಂಡರೆ, ಹೆಚ್ಚುವರಿಯಾಗಿ ನೀರು ಸಮುದ್ರಕ್ಕೆ ಹರಿದು ಹೋಗುವುದನ್ನು ತಪ್ಪಿಸಬಹುದು ಹಾಗೂ ಭೂ ಗರ್ಭ ಜಲ ಹೆಚ್ಚಳಕ್ಕೂ ಸಹಕಾರಿಯಾಗುತ್ತದೆ ಎಂದರು.

ಈಗಾಗಲೇ ಕೇಂದ್ರ ಮತ್ತು ರಾಜ್ಯದ ವಿವಿಧ ಯೋಜನೆಗಳ ಮೂಲಕ ಕೆರೆ ತುಂಬಿಸುವ ಕಾರ್ಯ ನಡೆದಿದೆ ಎಂದೂ ಅವರು ಹೇಳಿದರು.

ಈ ಬಾರಿಯ ಬಜೆಟ್‌ನಲ್ಲಿ ಇಲಾಖೆಗೆ 4 ಸಾವಿರ ಕೋಟಿ ರೂ. ಕಡಿತ ಮಾಡಲಾಗಿದೆ, ಮುಂದಿನ ದಿನಗಳಲ್ಲಿ ಹಣಕಾಸಿನ ಸಾಧ್ಯತೆ ನೋಡಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ತಿಳಿಸಿದರು.

ನಮ್ಮ ಇಲಾಖೆಯಲ್ಲಿ ಈಗಾಗಲೇ 1.25 ಲಕ್ಷ ಕೋಟಿ ಯಷ್ಟು ಕಾಮಗಾರಿಗಳು ನಡೆಯುತ್ತಿವೆ, ಈಗ ನಡೆಯುತ್ತಿರುವ ಕಾಮಗಾರಿಗಳ ಗುತ್ತಿಗೆದಾರರಿಗೆ ಶೇಕಡ 10 ರಿಂದ 15 ರಷ್ಟು ಬಿಲ್ ಪಾವತಿ ಮಾಡುವ ಪರಿಸ್ಥಿತಿ ಇದೆ. ಗುತ್ತಿಗೆದಾರರಿಗೆ ಹಣ ನೀಡಿದರೆ ಯೋಜನೆಗಳು ತ್ವರಿತಗತಿಯಲ್ಲಿ ಪೂರ್ಣಗೊಳ್ಳುತ್ತವೆ. ಕೇಂದ್ರದ ಅಸಹಾಕಾರದಿಂದ ನಾವು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದ್ದೇವೆ ಎಂದವರು ಆರೋಪಿಸಿದರು.

## ನಗರದಲ್ಲಿ ಇಂದು ಶ್ರೀ ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ಪರಿವಾರದಿಂದ ಭಾರತ ಹುಣ್ಣಿಮೆ ಅಂಗವಾಗಿ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆಯು ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7ಕ್ಕೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷ ಡಾ. ರಮೇಶ್ ಪಟೇಲ್ ತಿಳಿಸಿದ್ದಾರೆ. ಬಿ.ಸತ್ಯನಾರಾಯಣಮೂರ್ತಿ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.

## ಮನೆ ಕಳ್ಳತನ, ಮೋಟಾರ್ ಕಳ್ಳತನ : ಬಂಧನ



ದಾವಣಗೆರೆ, ಫೆ.23- ಮನೆ ಕಳ್ಳತನ ಹಾಗೂ ಮೋಟಾರ್ ಕಳ್ಳತನ ಮಾಡಿದ್ದ ಇಬ್ಬರನ್ನು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಓರ್ವ ತಲೆ ಮರೆಸಿಕೊಂಡಿದ್ದಾನೆ.

ಮನೆಯಲ್ಲಿ ಕಳ್ಳತನವಾದ ಬಗ್ಗೆ 2023ರ ಆಗಸ್ಟ್ 27 ರಂದು ಬಿ.ಕಲಪನಹಳ್ಳಿ ಗ್ರಾಮದ ಇಷ್ಟಲಿಂಗಯ್ಯ ಎಂಬುವವರು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು ದಾವಣಗೆರೆ ಮುದ್ದಾಭೋವಿ ಕಾಲೋನಿಯ ಸಾಧಿಕ್ ಈತನನ್ನು ದಸ್ತಗಿರಿ ಮಾಡಿ ವಿಚಾರಿಸಲಾಗಿ, ಇವನು ಅಣ್ಣಾ ನಗರದ ಸಮೀವುಲ್ಲಾ ಹಾಗೂ ಗೌಸ್ ಪೀರ್ ಜೊತೆ ಸೇರಿ ಕಳ್ಳತನ ಕೃತ್ಯ ಎಸಗಿದ್ದಾನೆಂದು ತಿಳಿದು ಬಂದಿದೆ.

ಬಂಧಿತರಿಂದ 13.91 ಲಕ್ಷ ರೂ. ಬೆಲೆಯ 28.13 ಗ್ರಾಂ ಬಂಗಾರದ ಆಭರಣ, ಹಿತ್ತಾಳೆ ಕೊಳಗ, 40 ಸಾವಿರ ರೂ. ಬೆಲೆ ನೀರೆತ್ತುವ ಮೋಟಾರ್ ಹಾಗೂ ಕೃತ್ಯಕ್ಕೆ ಬಳಸಿದ 60 ಸಾವಿರ ರೂ. ಬೆಲೆಯ ಸ್ಕೂಟರ್ ವಶಪಡಿಸಿಕೊಳ್ಳಲಾಗಿದೆ. ಆರೋಪಿತರಿಂದ ಗ್ರಾಮಾಂತರ ಪೊಲೀಸ್ ಠಾಣೆಯ 3 ಪ್ರಕರಣಗಳು ಹಾಗೂ ಬಸವನಗರ ಠಾಣೆಯ 2 ಪ್ರಕರಣಗಳು ಪತ್ತೆಯಾಗಿವೆ. ಒಬ್ಬ ಆರೋಪಿ ತಲೆ ಮರೆಸಿಕೊಂಡಿದ್ದು, ಅವನನ್ನೂ ಪತ್ತೆ ಮಾಡಿ ಮಾಲು ವಶಪಡಿಸಿಕೊಳ್ಳುವುದು ಬಾಕಿ ಇರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಆರೋಪಿತರನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾದ ಗ್ರಾಮಾಂತರ ಠಾಣೆಯ ಪಿ.ಐ ಕಿರಣ್ ಕುಮಾರ್, ಬಿ ಇಸ್ಮಾಯಿಲ್, ಮಂಜುನಾಥ ಕಲ್ಲೇದೇವರ ಹಾಗೂ ಗ್ರಾಮಾಂತರ ಠಾಣೆಯ ಪಿಎಸ್‌ಐ ಜೋವಿತ್ ರಾಜ್ ಮತ್ತು ಸಿಬ್ಬಂದಿಗಳಾದ ದೇವೇಂದ್ರ ನಾಯ್ಕ್, ಅಣ್ಣಯ್ಯ, ಮಹಮ್ಮದ್ ಯುಸುಫ್, ವೀರೇಶ್, ಎಸ್. ಎಂ. ಅಕ್ತರ್ ಅವರುಗಳನ್ನು ಎಸ್ಪಿ ಉಮಾ ಪ್ರಶಾಂತ್ ಶ್ಲಾಘಿಸಿದ್ದಾರೆ.

## ನಾಗನೂರು ಬಳಿ ಮಹಿಳೆಯ ಶವ ಪತ್ತೆ

ದಾವಣಗೆರೆ, ಫೆ.23- ನಾಗನೂರು ಗ್ರಾಮದ ಶಾಮನೂರು ರಸ್ತೆ ಪಕ್ಕದಲ್ಲಿನ ಚಾಲನ್‌ನಲ್ಲಿ ಸುಮಾರು 60 - 65 ವರ್ಷ ವಯಸ್ಸಿನ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿದೆ.

ಫೆ.18 ರಂದು ಒಂದು ಮೃತ ದೇಹ ತೇಲಿಕೊಂಡು ಬರುವುದನ್ನು ಕಂಡು ಹಳೇಬಿಸಲೇರಿ ಗ್ರಾಮದ ಶಿವಪ್ಪ ಪೋಲಿಸ್ ಠಾಣೆಗೆ ದೂರು ಕೊಟ್ಟಿರುತ್ತಾರೆ.

ಸಾಧಾರಣ ಮೈ ಕಟ್ಟು, ಮೈಮೇಲೆ ಬಂಗಾರದ ಬಣ್ಣದ ಎಲೆಗಳ ಚಿತ್ರವಿರುವ ನೀಲಿ ಹಾಗೂ ಕೆಂಪು ಬಣ್ಣದ ಸೀರೆ, ಕಪ್ಪು ಬಣ್ಣದ ಜಾಕೀಟು, ಕುತ್ತಿಗೆಯಲ್ಲಿ ರೋಡ್‌ಗೋಲ್ಡ್ ಸರ, ಕಿವಿಯಲ್ಲಿ ಹರಳಿನ ಓಲೆ, ಕೈಯಲ್ಲಿ ಕೆಂಪು ಬಣ್ಣದ ಬಳೆಗಳು ಇರುತ್ತವೆ. ಸಂಬಂಧಪಟ್ಟವರು ಹದಡಿ ಠಾಣೆ (9980803254, 08192-218405, ಕಂಟ್ರೋಲ್ ರೂಂ. ನಂ.08192-253100)ಯನ್ನು ಸಂಪರ್ಕಿಸಬಹುದು ಎಂದು ಉಪ ನೀಕ್ಷಕರರಾದ ಅಕ್ಬರ್ ಮುಲ್ಲಾ ತಿಳಿಸಿದ್ದಾರೆ.

## ನಾಗನೂರಿನಲ್ಲಿ ಅಪರಿಚಿತ ಶವ ಪತ್ತೆ



ದಾವಣಗೆರೆ, ಫೆ.23- ಇಲ್ಲಿಗೆ ಸಮೀಪದ ನಾಗನೂರು ಗ್ರಾಮದ ಮಹೇಶ್ವರಯ್ಯ ತಂದೆ ಸಿದ್ದಲಿಂಗಯ್ಯ ಇವರ ತೋಟದ ಬುದುವಿನ ಪಕ್ಕದಲ್ಲಿ ಸುಮಾರು 55 ರಿಂದ 60 ವಯಸ್ಸಿನ ವ್ಯಕ್ತಿಯೊಬ್ಬನ ಮೃತ ದೇಹವು ದೊರೆತಿದೆ.

ಮೃತನ ಮೈಮೇಲೆ ನೀಲಿ ಬಣ್ಣದ ಬನಿಯನ್ ಹಾಗೂ ಮಾಸಲು ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು, ನೋಡಲು ಭಿಕ್ಷುಕನಂತೆ ಕಾಣುತ್ತಿರುವುದರಿಂದ ಮೃತನ ಹೆಸರು ವಿಳಾಸ, ವಾರಸುದಾರರು ಯಾರೆಂದು ತಿಳಿದು ಬಂದಿರುವುದಿಲ್ಲ. ಮಾಹಿತಿ ದೊರೆತಲ್ಲಿ ಹದಡಿ ಪೊಲೀಸ್ ಠಾಣೆ (08192-218405, 94808 03254, ಕಂಟ್ರೋಲ್ ರೂಂ-08192-253100) ಯನ್ನು ಸಂಪರ್ಕಿಸುವಂತೆ ಹದಡಿ ಪೊಲೀಸ್ ಉಪನಿರೀಕ್ಷಕ ಅಕ್ಬರ್ ಮುಲ್ಲಾ ತಿಳಿಸಿದ್ದಾರೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas


ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನನ್ನ ಸಂವಿಧಾನ, ನನ್ನ ಜೀವನ...
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯಕ್ಕಾಗಿ
ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶ
ಭಾರತದ ಸಂವಿಧಾನ ಜಾರಿಯಾದ 75ನೇ ವರ್ಷಾಚರಣೆಯ ಅಂಗವಾಗಿ ಸಂವಿಧಾನದ ಆಶಯಗಳನ್ನು ಜನತೆಗೆ ತಲುಪಿಸುವಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರ ಯಶಸ್ವಿಯಾಗಿ ಮುನ್ನಡೆದಿದೆ.
25 ಫೆಬ್ರವರಿ 2024, ಮಧ್ಯಾಹ್ನ 1.30 ಗಂಟೆಯಿಂದ
ಕೃಷ್ಣ ವಿಹಾರ್, ಅರಮನೆ ಮೈದಾನ, ಬೆಂಗಳೂರು
ಕಾರ್ಯಕ್ರಮ ಸ್ಥಳದ ಮ್ಯಾಪ್ ಹಾಗೂ ಹೆಚ್ಚಿನ ವಿವರಗಳಿಗೆ QR CODE SCAN ಮಾಡಿ.
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ
ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು, ಭಾರತದ ಸಂವಿಧಾನದಲ್ಲಿ ಪ್ರತಿಪಾದಿತವಾಗಿರುವ ಪ್ರಜಾಪ್ರಭುತ್ವ ತತ್ವಗಳ ಕುರಿತು ಮಾತನಾಡುತ್ತಿರುವುದು.
ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿ
ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ : https://constitutionofindia-karnataka.in
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 | ₹1500
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ನಾಲೆಗೆ ನೀರು: ಅವೈಜ್ಞಾನಿಕ ವೇಳಾಪಟ್ಟಿ ರದ್ದುಗೊಳಿಸಿ

**(1ನೇ ಪುಟದಿಂದ)** ತಹಶೀಲ್ದಾರ್ ಅಶ್ವತ್ಥ್ ಅವರು, ಜಿಲ್ಲಾಧಿಕಾರಿಗಳು ಮಾತು ಕತೆಗೆ ಕರೆದಿದ್ದಾಗಿ ರೈತ ಮುಖಂಡರನ್ನು ಆಹ್ವಾನಿಸಿ, ನಂತರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಂಜೆ ಸಭೆ ನಡೆಯಿತು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ರೈತ ಮುಖಂಡರು, ಜಿಲ್ಲೆಯ ಪ್ರತಿನಿಧಿಯಾಗಿ ಐಸಿಸಿ ಸಭೆಗೆ ಹೋಗುವ ಜಿಲ್ಲಾಧಿಕಾರಿಗಳು, ಅಲ್ಲಿಗೆ ತೆರಳುವ ಮುನ್ನ ಸಂಬಂಧಿಸಿದ ಇಲಾಖೆಗಳೊಂದಿಗೆ ಸಭೆ ನಡೆಸಿ ಮಾಹಿತಿ ಪಡೆಯಬೇಕು. ಅಚ್ಚುಕಟ್ಟು ಪ್ರದೇಶ ಎಷ್ಟಿದೆ, ಎಷ್ಟು ನೀರು ಬೇಕಾಗುತ್ತದೆ ಎಂಬ ಮಾಹಿತಿ ಪಡೆದು ಹೋಗಬೇಕು. ಕೇವಲ ಅಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಷ್ಠಾನ ಗೊಳಿಸುವುದಷ್ಟೇ ನಿಮ್ಮ ಕರ್ತವ್ಯವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಅವರು, ಈಗಾಗಲೇ ನಾಲೆ ವ್ಯಾಪ್ತಿಯಲ್ಲಿ ಅಕ್ರಮ ಪಂಪ್‌ಸೆಟ್‌ಗಳನ್ನು ತೆರವು ಗೊಳಿಸಲು ಬಿಗಿ ಕ್ರಮ ಕೈಗೊಳ್ಳಲಾಗಿದೆ. ಅಕ್ರಮ ಪಂಪ್ ಸೆಟ್ ತೆರವು ಮಾಡಿದರೆ ಮಾತ್ರ ನಾಲೆಯಲ್ಲಿ ನೀರು ಸರಾಗವಾಗಿ ಹರಿಯುತ್ತದೆ ಎಂದರು.



ರೈತ ಮುಖಂಡರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಸಭೆ ನಡೆಸಿದರು.

ಅಧ್ಯಕ್ಷರು, ಶಿವಮೊಗ್ಗ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ 20 ದಿನ ನೀರು ಬಿಡಲು ಪ್ರಯತ್ನ ಮಾಡುವ ಭರವಸೆ ನೀಡಿದರು.

ಸಭೆಯಲ್ಲಿ ರೈತ ಮುಖಂಡರಾದ ತೇಜಸ್ವಿ ಪಟೇಲ್, ಕೋಳೇನಹಳ್ಳಿ ಬಿ.ಎಂ. ಸತೀಶ್, ಮತ್ತಿ ವಕೀಲ ಹನುಮಂತಪ್ಪ, ಕುಕ್ಕುವಾಡದ ಕೆ.ಎನ್ ಮಂಜುನಾಥ್, ಡಿ.ಮಲ್ಲೇಶಪ್ಪ, ಡಿ.ಸಿ. ದಿನೇಶ್, ಡಿ.ಬಿ. ಅರವಿಂದ್, ಎಸ್.ಎಂ. ಕುಮಾರಸ್ವಾಮಿ, ಚಂದ್ರಪ್ಪ ಮೇಷ್ಟ್ರು, ಮುದಹದಡಿ ದಿಳ್ಳೆಪ್ಪ, ಕಾರಿಗನೂರು ಮಂಜುನಾಥ ಪಟೇಲ್, ಬಿ.ಎಲ್. ಸತೀಶ್, ಶಿವಣ್ಣ, ಗಂಗಾಧರ, ಹೂವಿನಮಡು ಪ್ರಕಾಶ್, ಗೋಣಿವಾಡ ಪಿ.ಎ. ನಾಗರಾಜಪ್ಪ ಮುಂತಾದವರು ಉಪಸ್ಥಿತರಿದ್ದರು.

## ನಿರ್ದಿಷ್ಟ ಯೋಜನೆಗಾಗಿ ರಾಜ್ಯಗಳಿಗೆ ಆದೇಶ ನೀಡಲಾಗದು : ಸುಪ್ರೀಂ

ನವದೆಹಲಿ, ಫೆ. 23 - ನಿರ್ದಿಷ್ಟ ಯೋಜನೆಯನ್ನು ಜಾರಿಗೆ ತರುವಂತೆ ರಾಜ್ಯಗಳಿಗೆ ಆದೇಶ ನೀಡಲಾಗದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಹಸಿವು ನಿವಾರಣೆಗಾಗಿ ಸಮುದಾಯ ಅಡುಗೆ ಮನೆಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಸೂಚನೆ ನೀಡಬೇಕು ಎಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ನ್ಯಾಯಾಲಯ ಈ ನಿಲುವು ತಳೆದಿದೆ.

ರಾಷ್ಟ್ರೀಯ ಆಹಾರ ಸುರಕ್ಷತಾ ಕಾಯ್ದೆ ಹಾಗೂ ಇತರೆ ಜನಕಲ್ಯಾಣ ಯೋಜನೆಗಳನ್ನು ಸರ್ಕಾರಗಳು ಜಾರಿಗೆ ತರುತ್ತಿವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸರ್ಕಾರದ ನೀತಿಗಳನ್ನು ಪರಿಶೀಲಿಸಲು ಇರುವ ನ್ಯಾಯಿಕ ಪರಾಮರ್ಶೆ ಅಧಿಕಾರ ಸೀಮಿತವಾಗಿದೆ. ನ್ಯಾಯಾಲಯಗಳು ನಿರ್ದಿಷ್ಟ ನೀತಿಗಳು ಇಲ್ಲವೇ ಯೋಜನೆಗಳನ್ನು ಜಾರಿಗೆ ತರುವಂತೆ ಸರ್ಕಾರಕ್ಕೆ ಸೂಚನೆ ನೀಡಲಾಗದು ಎಂದು ನ್ಯಾಯಾಲಯ ತಿಳಿಸಿದೆ.

## ಕಾರ್ಮಿಕರಾಗಿ ಸಿರಿವಂತರೂ ಸೇರ್ಪಡೆ

**(1ನೇ ಪುಟದಿಂದ)** ಕಾರಣ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಸ್ಥಿತಿವಂತರೇ ಕಾರ್ಮಿಕ ಇಲಾಖೆಯಡಿ ಹೆಸರುಗಳನ್ನು ನೋದಾಯಿಸಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರದ ಮೂಲಕ ತನಿಖೆ ಮಾಡಿಸಲಾಗುವುದು ಎಂದರು.

2007ರಲ್ಲಿ ಕಾರ್ಮಿಕರ ಮಂಡಳಿ ಸ್ಥಾಪನೆಯಾಗಿತ್ತು, ಪ್ರಾರಂಭದಲ್ಲಿ ಮೂರು ಲಕ್ಷ ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದರು. 2007ರಲ್ಲಿ ಇದರ ಸಂಖ್ಯೆ 12 ಲಕ್ಷ ಇದ್ದು, ಕಾರ್ಮಿಕರ ಸಂಖ್ಯೆ ಇದ್ದಕ್ಕಿದ್ದಂತೆ 39 ಲಕ್ಷಕ್ಕೆ ಏರಿಕೆಯಾಯಿತು. ಇದೀಗ ಇದು 51 ಲಕ್ಷಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ನೋಂದಣಿಯಾಗಿರುವ ಕಾರ್ಮಿಕರು ಅರ್ಹರೋ ಅಥವಾ ಅನರ್ಹರೋ ಎಂಬುದನ್ನು ಅಂಬೇಡ್ಕರ್ ಸೇವಾ ಕೇಂದ್ರದ ಮೂಲಕ ತನಿಖೆ ಮಾಡಿಸುತ್ತೇವೆ ಎಂದರು.

ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಹೊರಗುತ್ತಿಗೆ ಪಡೆದುಕೊಂಡು ತನಿಖೆ ಮಾಡಿಸುತ್ತೇವೆ. ಯಾವುದೇ ಒಬ್ಬ ಕಾರ್ಮಿಕ ನೋಂದಣಿ ಮಾಡಿಕೊಳ್ಳಬೇಕಾದರೆ ಗ್ರಾಮ ಪಂಚಾಯ್ತಿಯ ಪಿಡಿಒ ಸೇರಿದಂತೆ ವಿವಿಧ ಹಂತಗಳಲ್ಲಿ ಪರಿಶೀಲನೆಯಾದ ಬಳಿಕವೇ ಈ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.

ಸರ್ಕಾರದ ಸವಲತ್ತು ಪಡೆಯುವ ಏಕೈಕ ಉದ್ದೇಶದಿಂದಲೇ ಆರ್ಥಿಕವಾಗಿ ಸದೃಢ ಇರುವವರು ಇದರಲ್ಲಿ ಸೇರಿಕೊಂಡಿದ್ದಾರೆ. ತನಿಖೆ ನಡೆದ ನಂತರ ಇದರ ಸತ್ಯಾಸತ್ಯತೆ ಗೊತ್ತಾಗಲಿದೆ ಎಂದರು.

ನಿಜವಾದ ಫಲಾನುಭವಿಗಳಿಗೆ ಸರ್ಕಾರದ ಸವಲತ್ತು ಸಿಗಬೇಕೆಂಬುದು ನಮ್ಮ ಉದ್ದೇಶ. ತನಿಖೆಯಲ್ಲಿ ಅನರ್ಹರು ಇದ್ದರೆ ಮುಲಾಜಿಲ್ಲದೆ ತೆಗೆದು ಹಾಕುತ್ತೇವೆ, ಒಂದು ವೇಳೆ ಇದರಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು ಕಂಡುಬಂದರೆ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ಕೊಟ್ಟರು.

## ಭಾರತ ಹುಣ್ಣಿಮೆ ಶುಭಾಶಯಗಳು

ಹುಣ್ಣಿಮೆ ಹುಣ್ಣಿಮೆ ಮಾಘದ ಹುಣ್ಣಿಮೆ
ಹುಣ್ಣಿಮೆ ಹುಣ್ಣಿಮೆ ಭಾರತ ಹುಣ್ಣಿಮೆ

ಮನೆಯದೇವರ ಹಬ್ಬದ ಹುಣ್ಣಿಮೆ
ಮನೆಮನೆಯಲು ಸಂತಸದ ಹುಣ್ಣಿಮೆ

ಯಲ್ಲಮದೇವಿಗೆ ಶ್ರೇಷ್ಠ ಈ ಹುಣ್ಣಿಮೆ
ಮೈಲಾರಲಿಂಗನ ಪೂಜಿಸೋ ಹುಣ್ಣಿಮೆ

ಎಲ್ಲರು ತಂತಮ್ಮ ಮನೆದೇವರನ್ನು
ಅಲ್ಲಲ್ಲಿ ಪೂಜಿಸಿ ಧನ್ಯರಾಗೋಣ ಹುಣ್ಣಿಮೆ

ಸ್ನಾನಕೆ ದಾನಕೆ ಶ್ರೇಷ್ಠ ಈ ಹುಣ್ಣಿಮೆ
ಸ್ನಾನ ನದಿಯಲ್ಲಿ ಮಾಡುವ ಹುಣ್ಣಿಮೆ

ಮೊರದ ಬಾಗಿನವ ನೀಡುವ ಹುಣ್ಣಿಮೆ
ಹೂರಣದ ಆರತಿ ಮಾಡುವ ಹುಣ್ಣಿಮ

ಉಧೋ ಉಧೋ ಎಂದು ಕೂಗುತ ಭಕ್ತರು
ಮುದದಿ ಎಲ್ಲಮ್ಮನ ಭಜಿಸಿ ಕುಣಿವರು

ಏಳುಕೋಟಿ ಏಳುಕೋಟಿ ಝೂಂಗಳೊ ಎಂದು
ಮಾಲಸಾಂಬ ಪತಿಯ ಹೊಗಳುವರು

ಭಂಡಾರ ಹಚ್ಚಿ ಹೋಳಿಗೆ ಮಾಡಿ
ಚೆಂದದಿ ನೈವೇದ್ಯ ಭಕ್ತಿಲಿ ಮಾಡಿ

ಬಂದು ರಕ್ಷಿಸೆಂದು ಶಿರಬಾಗಿ ಬೇಡಿ
ನೊಂದ ಎಲ್ಲರು ದೇವವ ಕೊಂಡಾಡಿ

ಶಕ್ತಿ ದೇವತೆಯಾರಾಧಿಸೊ ಹುಣ್ಣಿಮೆ
ಭಕ್ತಿಯ ಮಾತ್ರ ಬೇಡುವ ಹುಣ್ಣಿಮೆ

ಮುಕ್ತಿಕೊಡುವ ಬಾಲಗೋಪಾಲವಿಠಲನ
ಭಕ್ತಿಲಿ ಎಲ್ಲಾರು ಪೂಜಿಸೋ ಹುಣ್ಣಿಮೆ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

## ನಕಲಿ ಕಾಲ್‌ಸೆಂಟರ್ ನಡೆಸುತ್ತಿದ್ದ ಮಹಿಳೆ ಬಂಧನ

ನೋಯ್ಡಾ, ಫೆ. 23 - ಸಾಲ ಕೊಡಿಸುವುದಾಗಿ ಹೇಳಿ ವಂಚಿಸುತ್ತಿದ್ದ ನಕಲಿ ಕಾಲ್‌ಸೆಂಟರ್ ಒಂದನ್ನು ಬಯಲು ಮಾಡಿದ್ದು, ಎಂಟು ಜನರನ್ನು ಬಂಧಿಸಲಾಗಿದೆ. ಈ ನಕಲಿ ಕಾಲ್‌ಸೆಂಟರ್ ಅನ್ನು ಮಹಿಳೆಯೊಬ್ಬಳು ನಡೆಸುತ್ತಿದ್ದಳು ಎಂದು ಉತ್ತರ ಪ್ರದೇಶದ ವಿಶೇಷ ಕಾರ್ಯಪಡೆ (ಎಸ್.ಟಿ.ಎಫ್.) ತಿಳಿಸಿದೆ.

ಈ ತಂಡವು ಕೈಗಾರಿಕಾ ವಲಯದ ಬಾಡಿಗೆ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಸುಮಾರು 300 ಜನರಿಗೆ ಕೋಟ್ಯಂತರ ರೂ.ಗಳ ವಂಚನೆ ಮಾಡಲಾಗಿದೆ ಎಂದು ಎಸ್‌ಟಿಎಫ್ ಹೇಳಿದೆ.

ಈ ವಂಚನೆಯ ರೂವಾರಿಯಾಗಿದ್ದ ಮಹಿಳೆ ಸೇರಿದಂತೆ ಎಂಟು ಆರೋಪಿಗಳನ್ನು ಬಂಧಿಸಲಾಗಿದೆ. ಇವರು ಇಂಡಿಯಾ ಬುಲ್ಸ್ ಕನ್ಸೂಮರ್ ಫೈನಾನ್ಸ್ ಮೂಲಕ ಸಾಲ ಕೊಡಿಸುವುದಾಗಿ ಹೇಳಿ ವಂಚಿಸುತ್ತಿದ್ದರು ಎಂದು ಎಸ್.ಟಿ.ಎಫ್. ಹೇಳಿದೆ.

ಇಂಡಿಯಾ ಬುಲ್ಸ್ ಹೆಸರಿನಲ್ಲಿ ನಕಲಿ ಸಾಲ ಮಂಜೂರಾತಿ ಪತ್ರಗಳನ್ನು ನೀಡಲಾಗುತ್ತಿತ್ತು. ಸಾಲಕ್ಕಾಗಿ ನೋಂದಣಿ, ಜಿ.ಎಸ್.ಟಿ., ವಿಮೆ ಮತ್ತಿತರೆ ಹೆಸರಿನಲ್ಲಿ ಹಣ ಪಡೆದು ಜನರನ್ನು ವಂಚಿಸಲಾಗುತ್ತಿತ್ತು.

ಈ ವಂಚನೆಯ ರೂವಾರಿ ಛಾಯಾ ಸಿಂಗ್, ಪ್ರಿಯಾ ಶುಕ್ಲ, ಆಂಚಲ್ ಚೌಧರಿ, ಸುಲೇಖ, ಅಂಕಿತ್ ಸಿಂಗ್, ವಿಜೇಂದ್ರ ಪ್ರತಾಪ್ ಸಿಂಗ್, ಅರ್ಚನಾ ಪ್ರಜಾಪತಿ ಹಾಗೂ ಶಿವಾನಿ ಠಾಕೂರ್ ಎಂಬುವವರನ್ನು ಬಂಧಿಸಲಾಗಿದೆ.

**ಮನೆ ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪೂರ್ವ ದಿಕ್ಕಿನ ಮನೆ ಗ್ರೌಂಡ್ ಫ್ಲೋರ್‌ನಲ್ಲಿ 2BHKಮನೆ, ಮೊದಲನೇ ಮಹಡಿಯಲ್ಲಿ ರೂಂ ವಿತ್ ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
9060081281, 94482-33389

**ಸೈಟ್ ಮಾರಾಟಕ್ಕೆ(KHB)**
ಹೌಸಿಂಗ್ ಬೋರ್ಡ್ 12x18 ಮೀಟರ್ (40x60) ಪಶ್ಚಿಮ 67 ಲಕ್ಷ.
**ಕಿರಣ್ ಬೂಸ್ನೂರ್**
97315-63409, 98440-63409
ರಿಜಿಸ್ಟರ್ ಖರ್ಚು + ಕಮೀಷನ್ ಸೇರಿ

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿರುವ ಸೈಟುಗಳು ಮಾರಾಟಕ್ಕಿವೆ
40x40, South, 30x50 North, 30x45 South, 60x60 North, 30x60 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಕೆಲಸಕ್ಕೆ ಉತ್ತಮ ಸಂವಹನ ಕೌಶಲ್ಯ ಹೊಂದಿರುವ ಮಹಿಳೆ ಬೇಕಾಗಿದ್ದಾರೆ.
ವಿದ್ಯಾರ್ಹತೆ : ಪಿಯುಸಿ ಅಥವಾ ಡಿಗ್ರಿ ಹೊಂದಿರುವವರು
**ಶ್ರೀ ಹರ ಮ್ಯೂಸಿಕಲ್ ವರ್ಲ್ಡ್**, ದಾವಣಗೆರೆ
ಸಂಜೆ 4.00 ರಿಂದ ರಾತ್ರಿ 8.30
81977 78488, 80733 92077

**ಕರ್ನಾಟಕ ಹೌಸಿಂಗ್ ಬೋರ್ಡ್ (KHB) ಸೈಟ್ ಮಾರಾಟಕ್ಕೆ**
ಕಮರ್ಷಿಯಲ್ 1)40X60 ಉತ್ತರ 120 ಅಡಿ ರಸ್ತೆಗೆ (88 ಲಕ್ಷ) 2) 30x40 ಬನ್ನಿಕೋಡ್ 60 ಅಡಿ ರಸ್ತೆಗೆ (40ಲಕ್ಷ)
**ಕಿರಣ್ ಬೂಸ್ನೂರ್ : 98440-63409**
ರಿಜಿಸ್ಟರ್ ಖರ್ಚು+ಕಮಿಷನ್ ಸೇರಿ

**WANTED**
Accountant for Electronics Shop
**BHERAV DISTRIBUTOR**
Jaydev Circle Davangere
Minimum 2 year experience in Account handling. Boys only
Qualification : B.Com or MBA
90365-74144

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ, 40x60 ಉತ್ತರ, 40x50 ಪೂರ್ವ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ, ಸರಸ್ವತಿ ಬಡಾವಣೆಯಲ್ಲಿ 40x60 ಉತ್ತರ.
**ಸ್ವಾಮಿ ಏಜೆಂಟ್, ವಿದ್ಯಾನಗರ**
97421 44715

**ಸೈಟು ಮಾರಾಟಕ್ಕಿದೆ**
KHB ಲೇಔಟ್ ದಾವಣಗೆರೆಯಲ್ಲಿ 50x80 ಪಶ್ಚಿಮ ಸೈಟ್ ಓನರ್‌ಗೆ ಸಂಪರ್ಕಿಸಿ
63621 81509

**ಬಾಡಿಗೆಗೆ ಬರುವಂತಹ ಮಳಿಗೆಗಳು ಮಾರಾಟಕ್ಕಿವೆ**
ಪಿ.ಬಿ.ರಸ್ತೆ ಹತ್ತಿರ ಬಾರ್ ಹಿಂಭಾಗ 20x20 ಸೈಟ್ ಪೂರ್ವ ದಿಕ್ಕು, 35 ಲಕ್ಷಕ್ಕೆ
**ಐನಳ್ಳಿ ಚನ್ನಬಸಪ್ಪ ಏಜೆಂಟ್**
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
**ಸ್ವಾಮಿ ಏಜೆಂಟ್, ವಿದ್ಯಾನಗರ**
97421 44715

**ಹುಡುಗರು ಬೇಕಾಗಿದ್ದಾರೆ**
ಕನ್ನಡ ಭಾಷಾ ಜ್ಞಾನ ಮತ್ತು ಟೈಪಿಂಗ್ ಅನುಭವವಿರುವವರು ಬೇಕಾಗಿದ್ದಾರೆ ಸಂಪರ್ಕಿಸಿ : ಬೆಳಿಗ್ಗೆ 11 ರಿಂದ ಸಂಜೆ 5.30ರವರೆಗೆ
08192 254736

**ಬೇಕಾಗಿದ್ದಾರೆ**
ಆವರಗೆರೆಯಲ್ಲಿರುವ ಶ್ರೀ ಶಂಕರಲೀಲಾ ಕಲ್ಯಾಣ ಮಂಟಪದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
99164-54770

**ಬೇಕಾಗಿದ್ದಾರೆ**
Pizza ಶಾಪ್‌ನಲ್ಲಿ ಕೆಲಸಕ್ಕೆ ಹುಡುಗಿ ಬೇಕಾಗಿದ್ದಾರೆ.
99860 00676

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟು & ಮನೆ ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ ಮನೆ (30x50) ಪಶ್ಚಿಮ
2) ಡಾಲರ್ಸ್ ಕಾಲೋನಿ ಸೈಟ್ (40x51) ಪಶ್ಚಿಮ
3) ಹಳೇ ಕುಂದವಾಡ ಸೈಟ್ (30x50) ಪಶ್ಚಿಮ
ಸಂಪರ್ಕಿಸಿ:
97404 47907, 91481 25125

**ಮನೆ ಮಾರಾಟಕ್ಕೆ ಇದೆ**
ದಾವಣಗೆರೆ ಚಿಕ್ಕಮ್ಮಣಿ ಲೇಔಟ್ ಸರಸ್ವತಿ ಡಾಬಾ ಸ್ವಾಪ್ ಹತ್ತಿರ ಉತ್ತರಾಭಿಮುಖವಾಗಿರುವ 30x40 ಅಳತೆಯ 2 ಮಹಡಿ, ನೆಲ ಮಹಡಿ 30x40 2BHK, ಮೊದಲನೇ ಮಹಡಿ 20x30 2BHK 2 ಪೂರ್ವ ದಿಕ್ಕಿನ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
98447 31736

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಎಂ.ಸಿ.ಸಿ. 'ಬಿ' ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
99164-54770

**ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆಯ 8ನೇ ಮೇನ್, 8ನೇ ಕ್ರಾಸ್‌ನಲ್ಲಿ ಎರಡು ಬೆಡ್ ರೂಂ, ಒಂದು ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94480 28103

**ಬಾಡಿಗೆಗೆ / ಲೀಸ್‌ಗೆ ಇದೆ**
ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿ (ಬ್ರಿಕ್ಸ್) ಬಾಡಿಗೆ ಅಥವಾ ಲೀಸ್‌ಗೆ ಕೊಡಲಾಗುವುದು.
ಮಲೇಬೆನ್ನೂರು ರಸ್ತೆ, ಜರೀಕಟ್ಟೆ ದಾವಣಗೆರೆ ತಾ. ಜಿ.
99017 74089

**ಉತ್ತರ ದಿಕ್ಕಿನ ಮನೆ ಮಾರಾಟಕ್ಕಿದೆ**
ಆಂಜನೇಯ ಬಡಾವಣೆಯಲ್ಲಿ, ಪೂರ್ವ ಉತ್ತರ ದಿಕ್ಕಿನ ನಿವೇಶನದಲ್ಲಿ ಕಟ್ಟಿರೋ, ಉತ್ತರ ಬಾಗಿಲುಳ್ಳ 15 × 45 ಅಳತೆಯ ಮನೆ ಮಾರಾಟಕ್ಕಿದೆ. ಒಟ್ಟು 15 ಚದುರಡಿಯಲ್ಲಿ ಮೂರು ಮನೆಗಳಿವೆ. ಆಸಕ್ತರು ಮಾತ್ರ ಸಂಪರ್ಕಿಸಿ.
95352 82899, 9845216749
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅನುಭವವುಳ್ಳ ದೋಸೆ ಭಟ್ಟರು, ಟೀ-ಕಾಫಿ ಮಾಡುವವರು, ಸಪ್ಲೈಯರ್‌ಗಳು, ಕೌಂಟರ್ ಹುಡುಗರು, ಕ್ಲೀನರ್‌ಗಳು, ಚಾಟ್ಸ್ ಮಾಡುವವರು, ಹೆಲ್ಪರ್ ಗಳು ಬೇಕಾಗಿದ್ದಾರೆ.
ಉಚಿತ ಊಟ ಮತ್ತು ವಸತಿ ಸೌಲಭ್ಯವಿದೆ.
95350 35660, 63646 64518

**ಸೌಹಾರ್ದ ಸಂಸ್ಥೆಗೆ ಕೆಲಸಕ್ಕೆ ಬೇಕಾಗಿದ್ದಾರೆ**
* ಅಕೌಂಟೆಂಟ್ (B.Com., Tally)
* ಪಿಗ್ಮಿ ಏಜೆಂಟ್ಸ್ * ಆಫೀಸ್ ಬಾಯ್
* ಕಲೆಕ್ಷನ್ ಬಾಯ್ಸ್ (ESI ಸೌಲಭ್ಯವಿದೆ)
(ವಯೋಮಿತಿ 25 ರಿಂದ 45)
78478 40368

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50, 30x40 ಪೂರ್ವ, ಎಸ್.ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ ಶ್ರೀ ಸಾಮಾನ್ಯದಲ್ಲಿ 30x43 ಉತ್ತರ 40 ಅಡಿ ರಸ್ತೆಗೆ, ಬೈಪಾಸ್ ಸರ್ವೀಸ್ ರಸ್ತೆಗೆ, 30x55 ದಕ್ಷಿಣ (ಕಮರ್ಷಿಯಲ್) ಸರ್ಕಾರಿ ನೌಕರರ ಪಕ್ಕದ ಬಡಾವಣೆಯಲ್ಲಿ 30x40 ಪೂರ್ವ 2 ಸೈಟ್‌ಗಳು ಮಾರಾಟಕ್ಕೆ ಇವೆ.
ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**SHOP FOR RENT**
Boys Hostel Road, Ist Floor Shop For Rent 7th Cross, 9th Main
82177 72482

**ಮನೆ ಬಾಡಿಗೆಗಿದೆ**
2 BHK, ಹಾಲ್, ಕಿಚನ್ ಇರುವ ಮನೆ, 1ನೇ ಫ್ಲೋರ್‌ನಲ್ಲಿ ಬಾಡಿಗೆಗಿದೆ. ಬೋರ್‌ವೆಲ್ ನೀರಿನ ಸೌಲಭ್ಯವಿದೆ. ಎಂ.ಸಿ.ಸಿ. ಎ ಬ್ಲಾಕ್, ಪುರಂತರ್ ಹಾಸ್ಪಿಟಲ್ ಹತ್ತಿರ, ದಾವಣಗೆರೆ.
88619 94260

**NEED COMPUTER OPERATER**
For Cyber Shop, Near Ram & Co. Circle, Davangere.
70221 58935

## ಸಾರ್ವಜನಿಕ ತಿಳುವಳಿಕೆ ಪ್ರಕಟಣೆ

ತರಳಬಾಳು ಬಡಾವಣೆ ಮನೆ ನಂ 368/A40 ರಲ್ಲಿ ವಾಸವಾಗಿರುವ ದಿ|| ಕೆ.ಆರ್. ನಂಜಪ್ಪ ಇವರ ಮಗಳಾದ ಕೆ.ಎನ್. ರೇಖಾ ಕೋಂ ಎನ್.ಪಿ. ನರೇಂದ್ರ (96326 89359) ವಯಸ್ಸು (52) ವರ್ಷ ಇವರು ದಾವಣಗೆರೆ ತಾಲ್ಲೂಕು ನಿಟುವಳ್ಳಿ ಗ್ರಾಮದ ರಿ. ಸರ್ವೆ ನಂ 26 ವಿಸ್ತೀರ್ಣ 11 ಎಕರೆ 21 ಗುಂಟೆವುಳ್ಳ ಜಮೀನಿನಲ್ಲಿ ದಿನಾಂಕ: 21.03.1996 ರಂದು ಅಲಿನೇಷನ್ ಆಗಿ ಜಿಲ್ಲಾಧಿಕಾರಿಯ ಆರ್ಡರ್ ನಂ. ಎ.ಎಲ್.ಎನ್.ಎಸ್.ಆರ್. 20/96-97ರ ಪ್ರಕಾರ ವಾಸೋಪಯೋಗಕ್ಕಾಗಿ ಪರಿವರ್ತನೆಯಾಗಿ ಸದ್ರಿ ಪ್ರದೇಶದಲ್ಲಿ 22.03.1997 ರಂದು ದಾವಣಗೆರೆ ನಗರ ಯೋಜನಾ ಪ್ರಾಧಿಕಾರದಿಂದ ಪ್ಲಾನ್ ಅಪ್ರೂವಲ್ ಆಗಿ ಹಾಗೂ ದಾವಣಗೆರೆ ಮಹಾನಗರ ಪಾಲಿಕೆಯ ಡೋರ್‌ನಂ ಸಹ ದಾಖಲಾಗಿ ಈ ನಿವೇಶನಗಳ ಪೈಕಿ ಸೈಟ್ ನಂ 99/A, ಸೈಜ್ 40x60 ಖಾಲಿ ನಿವೇಶನ ಡೋರ್ ನಂ. 1673/99A

ಚಕ್ಕುಬಂದಿ: ಪೂರ್ವಕ್ಕೆ : ಡೋರ್‌ನಂ 1673/99P ಉಳ್ಳ ಶ್ರೀಮತಿ ಪುಷ್ಪವತಿ ಕೋಂ
ಜೆ.ಎನ್. ದಿನೇಶರ ಮನೆ. ಪಶ್ಚಿಮಕ್ಕೆ : ಇದೇ ಸೈಟ್ ನಂಬರ್‌ನಲ್ಲಿ ನನ್ನ ಬಾಬ್ತು ಉಳಿದ ಜಾಗ.
ಉತ್ತರಕ್ಕೆ : 30 ಅಡಿ ರಸ್ತೆ
ದಕ್ಷಿಣಕ್ಕೆ : ನೀವು ಈ ದಿವಸ ನನ್ನಿಂದ ಕ್ರಯಕ್ಕೆ ಪಡೆಯುತ್ತಿರುವ ಸೈಟ್ ನಂ.
103 ರ ನಿವೇಶನ ಈ ಮಧ್ಯದ ಸೊತ್ತು ಹಾಗೂ
ಸೈಟ್ ನಂ : 103 ಅಳತೆ 40x60 ಖಾಲಿ ನಿವೇಶನ ಡೋರ್ ನಂ - 1677/103
ಚಕ್ಕುಬಂದಿ : ಪೂರ್ವಕ್ಕೆ : ಸೈಟ್ ನಂ. 103A
ಪಶ್ಚಿಮಕ್ಕೆ : ಸೈಟ್ ನಂ. 102
ಉತ್ತರಕ್ಕೆ : ನೀವು ಈ ದಿವಸ ನನ್ನಿಂದ ಕ್ರಯಕ್ಕೆ ಪಡೆಯುತ್ತಿರುವ
ಸೈಟ್ ನಂ.99/ಎ ರ ಪೈಕಿ ಖಾಲಿ ನಿವೇಶನ
ದಕ್ಷಿಣಕ್ಕೆ : 30 ಅಡಿ ರಸ್ತೆ ಈ ಮಧ್ಯದ ಸೊತ್ತು

ಈ ಎರಡು ಸೈಟುಗಳನ್ನು (ಖಾಲಿ ನಿವೇಶನಗಳನ್ನು) ನಾನು ಈ ಹಿಂದೆ ಕೆ.ಆರ್. ದ್ಯಾವಪ್ಪ ಬಿನ್ ರಾಮಪ್ಪ ಇವರಿಂದ ಸ್ವಯಾರ್ಜಿತವಾಗಿ ದಾವಣಗೆರೆ ಸಬ್‌ರಿಜಿಸ್ಟರ್ ಆಫೀಸ್‌ನಲ್ಲಿ ದಿನಾಂಕ: 20.06.2001 ರಂದು 1ನೇ ಪುಸ್ತಕದ 2788 ನೇ ಸಂಪುಟದ, 208-211ರ ಪುಟಗಳಲ್ಲಿ ರಿ.ನಂ. 2912/2001-02ನೇ ನಂಬರಾಗಿ ಹಾಗೂ ದಿನಾಂಕ: 20/06/2001 ರಂದು ದಾ. ಸ. ರಿಜಿಸ್ಟರ್ ಆಫೀಸಿನಲ್ಲಿ 1ನೇ ಪುಸ್ತಕದ 2786 ನೇ ಸಂಪುಟದ, 207-209 ರ ಪುಟಗಳಲ್ಲಿ ರಿ. ನಂ: 2908/2001-02 ನೇ ನಂಬರಾಗಿ ಎರಡು ಸೈಟ್‌ಗಳನ್ನು ಸ್ವಯಾರ್ಜಿತವಾಗಿ ಕ್ರಯಕ್ಕೆ ಪಡೆದುಕೊಂಡಿರುತ್ತೇನೆ ಹಾಗೂ ನನ್ನ ಹೆಸರಿಗೆ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಖಾತೆ ಸಹ ಇದ್ದು, ಸದರಿ ನಿವೇಶನಗಳನ್ನು ಮಾರಾಟ ಮಾಡಬೇಕಾಗಿರುವುದರಿಂದ ಸಾರ್ವಜನಿಕರ ಗಮನಕ್ಕೆ ಹಾಗೂ ಸದರಿ ನಿವೇಶನಗಳಲ್ಲಿ ಹಿತಾಸಕ್ತಿ ಉಳ್ಳವರು ಈ ಮೂಲಕ ತಿಳಿಸುವುದೇನೆಂದರೆ, ಯಾರಾದರೂ ಯಾವುದೇ ರೀತಿಯ ಹಕ್ಕು-ಬಾಧ್ಯತೆಯನ್ನು ಹೊಂದಿದಲ್ಲಿ ಈ ಪ್ರಕಟಣೆ ಪ್ರಕಟವಾದ 15 ದಿನಗಳ ಒಳಗೆ ಬಂದು ದಾಖಲೆ ಸಹಿತ ನಮಗೆ ತಿಳಿಸಬಹುದು, ಇಲ್ಲವಾದಲ್ಲಿ 15 ದಿವಸದ ನಂತರ ಸದರಿ ಎರಡು ನಿವೇಶನಗಳನ್ನು ನಾನು ಮಾರಾಟ ಮಾಡಲು ಬದ್ಧಳಾಗಿರುತ್ತೇನೆ ಎಂದು ತಿಳಿಯಬಯಸುತ್ತೇನೆ.

**ಇಂತಿ,**
**ಸಹಿ /- ಲತಾ ಕೆ.ಎನ್., ಕೆ.ಆರ್. ನಂಜಪ್ಪ ಅವರ ಮಗಳಾದ**
**ಕೆ.ಎನ್. ರೇಖಾ ಕೋಂ ಎನ್.ಪಿ. ನರೇಂದ್ರ**

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಪಿಬಿ ರಸ್ತೆ ಪಂಚ ದೇವಸ್ಥಾನದ ಹತ್ತಿರ 50x40 ಅಳತೆಯ ಉತ್ತರ ಮತ್ತು ಪೂರ್ವಾಭಿಮುಖ ವಾಗಿದ್ದು ಕಾರ್ನರ್ ಸೈಟ್ ಮಾರಾಟಕ್ಕಿದೆ.
98806-36090, 94497-30390

**ಪ್ರಿಂಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಆದಿತ್ಯ ಫ್ಲೆಕ್ಸ್, ದಾವಣಗೆರೆ.
ಸಂಪರ್ಕಿಸಿ :
86604 44537

**ಬೇಕಾಗಿದ್ದಾರೆ**
ನಮ್ಮ ಮಾರಾಟ ಮಳಿಗೆಯಲ್ಲಿ ಕೌಂಟರ್ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು.
**ಪರಿಮಳ ಕಾಫಿ ಕಂಪನಿ**
ಮಂಡಿಪೇಟೆ, ದಾವಣಗೆರೆ.
94482 72734

**ಮನೆ ಲೀಜ್‌ಗೆ ಇದೆ**
ಮೊದಲನೇ ಮಹಡಿಯ ಎರಡು ಬೆಡ್ರೂಮ್ ಇರುವ ಮನೆ ಲೀಜ್‌ಗೆ ಇದೆ.
ವಿಳಾಸ : ಶ್ರೀ ಮೈಲಾರಲಿಂಗೇಶ್ವರ ನಿವಾಸ #03, ದೇವರಾಜ್ ಅರಸ್ ಬಡಾವಣೆ 'ಬಿ' ಬ್ಲಾಕ್, ಎರಡನೆಯ ಹಂತ, ಎಸ್.ಪಿ.ಆಫೀಸ್ ಮುಂಭಾಗ, ದಾವಣಗೆರೆ.
83107 79775

**WANTED CAR DRIVERS**
Experienced in Automatic and manual Transmission for High end vehicle.
(Food & Accommodation will be provided)
Email : meethrcareer@gmail.com
90199 64655


**AVOID MOSQUITOES**
Mosquito Net For Doors & Windows
**SRI GOWRI ENTERPRISES**
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ವವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**FOR LEASE / RENT**
Ground Floor 2BHK size 30x40 North Face, D.No. 680/62 Kariyamma Layout Near kariyamma temple Davanagere.
82170 12565

**ಬಾಡಿಗೆಗೆ ಇದೆ**
ಶ್ರೀಶೈಲ ನಿಲಯ, ಬಿ ಬ್ಲಾಕ್, 4ನೇ ಮುಖ್ಯ ರಸ್ತೆ, 3ನೇ ಕ್ರಾಸ್, ವಾರ್ಡ್ ನಂ.44 ಎಸ್.ಎಸ್. ಬಡಾವಣೆ, ಸೈಟ್ ನಂ. 70, ಡೋರ್ ನಂಬರ್ 47 82/70, ದಾವಣಗೆರೆ - 577004, ಮೇಲ್ಕಂಡ ವಿಳಾಸದಲ್ಲಿ ಗ್ರೌಂಡ್ ಫ್ಲೋರ್‌ನ 2 ಬೆಡ್ ರೂಂನ ಮನೆ ಇತರೆ ಎಲ್ಲಾ ಸೌಲಭ್ಯಗಳೊಂದಿಗೆ ಬಾಡಿಗೆಗೆ ಇದ್ದು, ಆಸಕ್ತರು ಈ ಕೆಳಕಂಡ ಫೋನ್ ನಂಬರ್‌ಗೆ ನೇರವಾಗಿ ಸಂಪರ್ಕಿಸಲು ಕೋರಿದೆ. ಬ್ರೋಕರ್‌ಗಳಿಗೆ ಅವಕಾಶವಿಲ್ಲ.
94486 65631, 99020 55949

**ಬಾಡಿಗೆಗೆ ಇದೆ**
ಹಳೇ ಪಿ.ಬಿ.ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕ, ಮೊದಲನೇ ಮಹಡಿ 3600 ಚ.ಅಡಿ. ಎರಡನೇ ಮಹಡಿ 3600 ಚ.ಅಡಿ.
**ಸಂಪರ್ಕಿಸಿ.**
94480 28103

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

**ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
**ಡಾ|| ಎಚ್.ಆಯ್. ದೊಡ್ಡಮನಿ (G.R.No.8969)**
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಜಮೀನಿನ ಮೂಲ ದಾಖಲೆ ಪತ್ರಗಳು ಕಳೆದಿವೆ**
ಶ್ರೀ ಮಡ್ಡೇರ ಹನುಮಂತಪ್ಪ ಬಿನ್ ಮಡ್ಡೇರ ಭೀಮಪ್ಪ, #3461, 2ನೇ ಮೇನ್, 6ನೇ ಕ್ರಾಸ್, ಗುಂಡಿ ಸ್ಕೂಲ್ ಎದುರು, ಎಂಸಿಸಿ ಬಿ ಬ್ಲಾಕ್ ದಾವಣಗೆರೆ ವಾಸಿಯಾದ ನಾನು ಪ್ರಮಾಣೀಕರಿಸುವುದೇನೆಂದರೆ, ನಾನು ದಿ. 01.06.1991ರಂದು ಶಶಿಕಲಾ ಬಾಯಿ ಕೋಂ ಭವಾನಿ ಶಂಕರರಾವ್ ಇವರಿಂದ ರಿಜಿಸ್ಟರ್ ಕ್ರಯಪತ್ರ ನಂ. 2035/1991-92ರ ಮೂಲಕ ದಾವಣಗೆರೆ ತಾಲ್ಲೂಕು, ಆವರಗೆರೆ ಗ್ರಾಮದ ಸರ್ವೇ ನಂ. 271ರಲ್ಲಿ ವಿಸ್ತೀರ್ಣ ಎಕರೆ ಇಲ್ಲ ಗುಂಟೆ 8 ಜಮೀನನ್ನು ಖರೀದಿ ಮಾಡಿದ ಮೂಲ ದಾಖಲೆ ಪತ್ರಗಳು ದಿ. 01.08.2023ರಂದು ಮನೆ ಸ್ವಚ್ಛಗೊಳಿಸುವಾಗ ಕಳೆದುಹೋಗಿರುತ್ತವೆ. ಈ ಕುರಿತು ದಾವಣಗೆರೆ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ನಂ. 0946222/2024 ರಲ್ಲಿ ದೂರು ದಾಖಲಾಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ 94813 08990 ಈ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ.

## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.34ರ ಶಿವಕುಮಾರ ಸ್ವಾಮಿ ಬಡಾವಣೆಯ ಡೋರ್ ನಂ.814/58ರ ಸ್ವತ್ತಿನ ಪಾವತಿದಾರರಾದ ಶ್ರೀ ನಾಗರಾಜ್ ಶೆಟ್ಟಿ ಬಿನ್ ಗುಂಡಾಲ ಬಸಪ್ಪರವರ ಕ್ರಯಕ್ಕೆ ಪಡೆದಿದ್ದು, ಮಹಾನಗರ ಪಾಲಿಕೆಯ ದಾಖಲೆಯಾದ ಎಂ.ಎ.ಆರ್-19, ಕೆ.ಎಂ.ಎಫ್-24ರಲ್ಲಿ ಸದರಿ ಸ್ವತ್ತಿನ ಮಾಲೀಕರ ಹೆಸರನ್ನು ಶ್ರೀಮತಿ ಲಚ್ಚಿಬಾಯಿ ಕೋಂ ಶಂಕರ್‌ನಾಯ್ಕ ಎಂದು ತಿರುಚಿ ನಮೂದಿಸಿರುವುದು ಕಂಡುಬಂದಿರುತ್ತದೆ, ಪ್ರಯುಕ್ತ ಸದರಿ ವಿವರಗಳನ್ನು ರದ್ದುಪಡಿಸಲು ಕೋರಿ ಮನವಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ಹಾಜರುಪಡಿಸಿರುವ ಕ್ರಯಪತ್ರವು ದಾಖಲೆಯನ್ನು ಪರಿಶೀಲಿಸಲಾಗಿ ಶ್ರೀ ನಾಗರಾಜ ಶೆಟ್ಟಿ ಬಿನ್ ಗುಂಡಾಲ ಬಸಪ್ಪರವರು ನಿಟ್ಟುವಳ್ಳಿ ಗ್ರಾಮದ ರಿ.ಸ.ನಂ 42/1 ರಲ್ಲಿ ಅನುಮೋದನೆಯಾಗಿರುವ ಬಡಾವಣೆಯ ಮೂಲ ಮಾಲೀಕರಿಂದ ಡೋರ್ 814/58 ರ ಸ್ವತ್ತನ್ನು ಖರೀದಿಸಿರುವುದು ಕಂಡುಬಂದಿರುತ್ತದೆ. ಕಛೇರಿ ದಾಖಲೆಯಾದ ಎಂ.ಎ.ಆರ್-19 ದಾಖಲೆಯಲ್ಲಿ ತಿರುಚಿ ಶ್ರೀಮತಿ ಲಚ್ಚಿಬಾಯಿ ಕೋಂ ಶಂಕರ್ ನಾಯ್ಕ ಎಂದು ನಮೂದಿಸಿರು ವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ ಖಾಲಿ ನಿವೇಶನ ಕಂಡುಬಂದಿರುವುದರಿಂದ ಈ ಸಾರ್ವಜನಿಕ ಪ್ರಕಟಣೆ ಮೂಲಕ ಶ್ರೀಮತಿ ಲಚ್ಚಿ ಬಾಯಿ ಕೋಂ ಶಂಕರನಾಯ್ಕ ಆದ ನೀವು ಹಾಗೂ # ನಂ.814/58ಕ್ಕೆ ಮಾಲೀಕತ್ವದ ಸಂಬಂಧಿಸಿದಂತೆ ಆಕ್ಷೇಪಣೆಗಳು ಇದ್ದಲ್ಲಿ ದಾಖಲೆಗಳ ಸಮೇತ ಈ ಪ್ರಕಟಣೆ ಹೊರಡಿಸಿದ 15 ದಿನಗಳೊಳಗಾಗಿ ಈ ಕಛೇರಿಯ ಕಂದಾಯ ಶಾಖೆಗೆ ಹಾಜರುಪಡಿಸಲು ತಿಳಿಸಿದೆ. ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದ ಪಕ್ಷದಲ್ಲಿ ಡೋರ್ ನಂ.814/58ರ ಸ್ವತ್ತಿನ ಆಸ್ತಿ ತೆರಿಗೆ ಪಾವತಿ ಹೊಣೆಗಾರಿಕೆಯನ್ನು ಶ್ರೀ ನಾಗರಾಜ ಶೆಟ್ಟಿ ಬಿನ್ ಗುಂಡಾಲ ಶೆಟ್ಟಿ ರವರ ಹೆಸರಲ್ಲಿ ಮುಂದುವರೆಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದೆ.

**ಸಹಿ/- ಉಪ ಆಯುಕ್ತರು (ಕಂದಾಯ)**
**ಮಹಾನಗರ ಪಾಲಿಕೆ, ದಾವಣಗೆರೆ.**

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆಯ 3ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ 1BHK, 2BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
99005 47475

**ಫ್ಲಾಟ್ ಮಾರಾಟಕ್ಕಿದೆ**
ಎಸ್.ಎಸ್. ಲೇಔಟ್ 'ಎ' ಬ್ಲಾಕ್‌ನಲ್ಲಿರುವ ಬರುವ ರೆಸಿಡೆನ್ಸಿಯ ಅಪಾರ್ಟ್‌ಮೆಂಟ್‌ನಲ್ಲಿ 4BHK ಫ್ಲಾಟ್ ಮಾರಾಟಕ್ಕೆ ಇದೆ. ಎಲ್ಲಾ ಮೂಲ ಸೌಕರ್ಯಗಳನ್ನು ಹೊಂದಿರುತ್ತದೆ. ಇಚ್ಛೆಯುಳ್ಳವರು ಸಂಪರ್ಕಿಸಿ.
97421 66799

**ಸೈಟ್ ಮಾರಾಟಕ್ಕಿದೆ**
ರಶ್ಮಿ ಹಾಸ್ಟೆಲ್ ಪಕ್ಕದಲ್ಲಿರುವ ಸೈಟ್ ನಂ. 7ರ ಅಳತೆ 30x63 ಪಶ್ಚಿಮ ಮುಖವಿರುವ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
99166 12007

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20 KL ಟ್ಯಾಂಕರ್ ಲಾರಿಗೆ Hazard Licence ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ.
9008228222, 6360611836

**ಹೋಟೆಲ್ ವಸ್ತುಗಳು ಮಾರಾಟಕ್ಕೆ ಇವೆ**
ಡೀಪ್ ಫ್ರೀಜರ್, ಟೇಬಲ್ ಚೇರ್, ಬರ್ನರ್ ಮತ್ತು ಸಿಂಕ್ ಹೊಂದಿರುವ ಸ್ಟೀಲ್ ಕಿಚನ್ ಟೇಬಲ್, ಪಿಜ್ಜಾ ಓವನ್, ಕ್ರೋಕರಿ ಮಾರಾಟಕ್ಕೆ. ಸಂಪರ್ಕಿಸಿ.
6361297004

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್ ಸೇಲ್ಸ್ (ಸಗಟು) ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್ (ಹುಡುಗರು) ಮತ್ತು ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾಭ್ಯಾಸ 10+2 (SSLC, PUC) ಮೇಲ್ಪಟ್ಟವರು ವಿಚಾರಿಸಿ.
**ವೃಷಭ್ ಮೆಡಿಕಲ್ಸ್**
ಜಾಲಿನಗರ ಶಿವಾಲಿ ರಸ್ತೆ, ದಾವಣಗೆರೆ-6.
99805 32781

**REQUIRED SALES EXECUTIVE**
98444 93755

**ಮನೆ ಲೀಜ್‌ಗೆ ಇದೆ**
ಜಯನಗರ ಬಿ ಬ್ಲಾಕ್‌ನಲ್ಲಿ 3 ಬೆಡ್ ರೂಂ ಡುಪ್ಲೆಕ್ಸ್ ಮನೆ ಲೀಜ್‌ಗೆ ಇದೆ.
84949 49909

**ಲಾರಿ ಡ್ರೈವರ್ ಬೇಕಾಗಿದ್ದಾರೆ**
ಐಗೂರಿನಲ್ಲಿರುವ ಫ್ಯಾಕ್ಟರಿಗೆ ಅನುಭವವುಳ್ಳ ಲಾರಿ ಡ್ರೈವರ್ ಹಾಗೂ ಐಟಿಐ ಫಿಟ್ಟರ್ ಆಗಿರುವ ಮೆಕ್ಯಾನಿಕ್ ಬೇಕಾಗಿದ್ದಾರೆ.
99016 76700

**SECURITY GUARD**
**ಕೆಲಸಕ್ಕೆ ಬೇಕಾಗಿದ್ದಾರೆ**
ಹಳೆ ಮಾರ್ಕೆಟ್, ಚನ್ನಬಸಪ್ಪ ಬಟ್ಟೆ ಅಂಗಡಿ ರೋಡ್, ಹಳೆ ದಾವಣಗೆರೆ.
97409 77785

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

ಓಂ ಶ್ರೀ ಕೊಡಂಗಲ್ಲೂರು ಭಗವತಿದೇವಿ
**ಜ್ಯೋತಿಷ್ಯಾಲಯ**
**ಪಂಡಿತ್ ಸಂತೋಷ್ ಗುರೂಜಿ**
ವ್ಯಾಪಾರ, ಆರೋಗ್ಯ, ಲಗ್ನ, ಸಂತಾನ, ಮಾಟ-ಮಂತ್ರ, ಸಾಲದ ಬಾಧೆ, ಮಾನಸಿಕ ಚಿಂತೆ, ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳು ಇದ್ದರೆ ಶಾಶ್ವತ ಪರಿಹಾರ. ಶತಃ ಸಿದ್ಧ.
99728 37663
ವಿಳಾಸ : ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ.

**AVAILABLE FOR RENT**
"Khadi Siddhappa Arcade"
**Office/commercial Space,**
Basement- 700 sqft, Ground Floor- 600 sqft, 1st Floor- 800 sqft
Lawyer Main Road, KB Extension, Davanagere.
9844261046, 8722581400

# ಪ್ಲಾಸ್ಟಿಕ್ ಮುಕ್ತ ಚುನಾವಣೆಗೆ ಸಹಕರಿಸಲು ಮನವಿ



ಲೋಕಸಭಾ ಚುನಾವಣೆ : ಮುದ್ರಣ ಮಾಲೀಕರು, ಕೇಬಲ್ ಟಿ.ವಿ. ಆಪರೇಟರ್‌ಗಳೊಂದಿಗೆ ಜಿಲ್ಲಾಧಿಕಾರಿಗಳ ಸಭೆ

ದಾವಣಗೆರೆ, ಫೆ.23- ಮುಂಬರುವ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಾದಾಗಿನಿಂದ ಮುದ್ರಕರು ಹಾಗೂ ಕೇಬಲ್ ಆಪರೇಟರ್‌ಗಳು ಚುನಾವಣಾ ನಿಯಮಗಳ ಪಾಲನೆ ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮುಂಬರುವ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಮುದ್ರಣ ಮಾಲೀಕರು, ಕೇಬಲ್ ಆಪರೇಟರ್‌ಗಳೊಂದಿಗೆ ಇಂದು ಅವರು ಸಭೆ ನಡೆಸಿದರು.

ಚುನಾವಣಾ ಸಂಬಂಧಿ ಕರಪತ್ರಗಳು, ಪೋಸ್ಟರ್‌ಗಳನ್ನು ಮುದ್ರಣ ಮಾಡುವ ಮುದ್ರಕರು ಕರಪತ್ರ, ಪೋಸ್ಟರ್ ಹಿಂಭಾಗದಲ್ಲಿ ಮುದ್ರಣ ಮಾಲೀಕರ ಸಂಪೂರ್ಣ ವಿವರ ಹಾಗೂ ಮುದ್ರಣ ಮಾಡುತ್ತಿರುವ ಪ್ರತಿಗಳ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸಬೇಕೆಂದರು.

ಮುದ್ರಣಕ್ಕೆ ನೀಡುವವರಿಂದ ಅಪೆಂಡಿಕ್ಸ್-ಎ ರಡಿ ಅರ್ಜಿಯ ಸಂಪೂರ್ಣ ವಿವರ ಪಡೆದಿರಬೇಕು. ಮುದ್ರಣ ಮಾಡಿದ ಎರಡು ದಿನಗಳೊಳಗಾಗಿ ಮುದ್ರಕರು ಅಪೆಂಡಿಕ್ಸ್-ಬಿ ರಡಿ ಜಿಲ್ಲಾ ದಂಡಾಧಿಕಾರಿಗಳಿಗೆ ಸಲ್ಲಿಸಬೇಕು. ಫ್ಲೆಕ್ಸ್ ಸೇರಿದಂತೆ, ಪೋಸ್ಟರ್‌ಗಳನ್ನು ಮುದ್ರಣ ಮಾಡುವಾಗ ಪ್ಲಾಸ್ಟಿಕ್ ಬಳಸಬಾರದು. ಫ್ಲೆಕ್ಸ್ ಮುದ್ರಣವನ್ನು ಇಕೋಫ್ರೆಂಡ್ಲಿ ಕ್ಲಾತ್‌ನಲ್ಲಿ ಮುದ್ರಣ ಮಾಡುವ ಮೂಲಕ 2024 ರ ಲೋಕಸಭಾ ಚುನಾವಣೆಯನ್ನು ಪ್ಲಾಸ್ಟಿಕ್ ಮುಕ್ತ ಚುನಾವಣೆಯನ್ನಾಗಿ ಮಾಡೋಣ ಎಂದರು.

ಕೇಬಲ್ ಆಪರೇಟರ್‌ಗಳು ಚುನಾವಣೆಗೆ ಸಂಬಂಧಿಸಿದ ಜಾಹೀರಾತುಗಳನ್ನು ಪ್ರಸಾರ ಮಾಡುವಾಗ ಜಿಲ್ಲಾ ಎಂ.ಸಿ.ಎಂ.ಸಿ.ಯಿಂದ ಕಡ್ಡಾಯವಾಗಿ ಅನುಮತಿ ಪಡೆದುಕೊಳ್ಳಬೇಕು. ಯಾವುದೇ ವಿದ್ಯುನ್ಮಾನ ಮಾಧ್ಯಮದಲ್ಲಿ ಜಾಹೀರಾತು ಪ್ರಕಟಿಸುವಾಗ ಜಾಹೀರಾತು ವಿವರದ ಅನುವಾದಿತ ಯಥಾ ಪ್ರತಿಯೊಂದಿಗೆ ರಾಷ್ಟ್ರೀಯ ಪಕ್ಷ, ಅಭ್ಯರ್ಥಿಯಾಗಿದ್ದಲ್ಲಿ ಕನಿಷ್ಠ 3 ದಿನ ಮೊದಲು, ಇತರೆ ಪಕ್ಷ, ಪಕ್ಷೇತರ ಅಭ್ಯರ್ಥಿಯಾಗಿದ್ದಲ್ಲಿ 7 ದಿನ ಮೊದಲು ಅನುಬಂಧ-ಎ ಅರ್ಜಿ ರಡಿ ಸಲ್ಲಿಸಬೇಕು. ಅನುಬಂಧ-ಬಿ ರಡಿ ಅನುಮತಿ ನೀಡಲಾಗುತ್ತದೆ. ಈ ಸಮಿತಿಗೆ ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುತ್ತಾರೆ. ಸಾಮಾಜಿಕ ಜಾಲತಾಣದಲ್ಲಿ ಜಾಹೀರಾತು ಪ್ರಸಾರ ಮಾಡಲು ಸಹ ರಾಜಕೀಯ ಸಂಬಂಧಿ ಜಾಹಿರಾತುಗಳಿಗೆ ಅನುಮತಿ ಕಡ್ಡಾಯ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರೀನ್ ಭಾನು ಎಸ್.ಬಳ್ಳಾರಿ ಹಾಗೂ ಮುದ್ರಕರಾದ ಕೆ. ಮುರುಘೇಶಪ್ಪ, ಫ್ಲೆಕ್ಸ್ ಮುದ್ರಕರ ಸಂಘದ ಅಧ್ಯಕ್ಷ ಡಿ.ಸಿ.ಶ್ರೀನಿವಾಸ್, ದಾವಣಗೆರೆ ವಿಓನ್ ಕೆ.ಚಿದಾನಂದ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ದಲಿತರಿಗೆ ಮೀಸಲಿಟ್ಟ ಹಣ ಗ್ಯಾರಂಟಿ ಬಳಕೆಗೆ

## ಕಾಂಗ್ರೆಸ್ ಸರ್ಕಾರದ ನಡೆ ಖಂಡಿಸಿ ನಗರದಲ್ಲಿ ಬಿಜೆಪಿ ಪ್ರತಿಭಟನೆ




ಉಪ ವಿಭಾಗಾಧಿಕಾರಿ ಕಚೇರಿ ಮುಂಭಾಗದ ಪಿ.ಬಿ. ರಸ್ತೆಯಲ್ಲಿ ರಾಜ್ಯ ಸರ್ಕಾರದ ಪ್ರತಿಕೃತಿ ನಿರ್ಮಿಸಿ, ನೇಣು ಹಾಕುವಂತೆ ಅಣಕು ಪ್ರದರ್ಶನ

ದಾವಣಗೆರೆ, ಮಾ.23- ದಲಿತರಿಗೆ ಮೀಸಲಿಟ್ಟ ಹಣವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದೆ ಎಂದು ಆರೋಪಿಸಿ, ಸರ್ಕಾರದ ದಲಿತ ವಿರೋಧಿ ನೀತಿ ಖಂಡಿಸಿ ಜಿಲ್ಲಾ ಬಿಜೆಪಿ ಘಟಕದ ನೇತೃತ್ವದಲ್ಲಿ ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಜಿಲ್ಲಾ ಕಚೇರಿಯಿಂದ ಪ್ರತಿಭಟನಾ ಮೆರವಣಿಗೆ ಮೂಲಕ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು.

ರಾಜ್ಯದಲ್ಲಿ ಕಳೆದ ಒಂಭತ್ತು ತಿಂಗಳಲ್ಲಿ ಕಾಂಗ್ರೆಸ್ ಆಡಳಿತವು ದಲಿತ ಸಮುದಾಯದ ವಿಚಾರದಲ್ಲಿ ಕೇವಲ ಮಾತಿನಲ್ಲಿ ಮಾತ್ರ ಕಾಳಜಿ ತೋರಿ ದಲಿತ ಸಮುದಾಯವನ್ನು ವಂಚಿಸುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ಈ ಸಂದರ್ಭದಲ್ಲಿ ಆರೋಪಿಸಿದರು.

ಗ್ಯಾರಂಟಿ ಯೋಜನೆಯ ಸಲುವಾಗಿ ಸರ್ಕಾರ ಶಿಕ್ಷಣವನ್ನು ನಿರ್ಲಕ್ಷಿಸುತ್ತಿದೆ. ರೈತ ನಿಧಿ ಯೋಜನೆಯಲ್ಲಿ ದಲಿತ ಕುಟುಂಬದ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನ ಸ್ಥಗಿತಗೊಂಡಿದೆ. ಕಿಸಾನ್ ಸಮ್ಮಾನ್ ಯೋಜನೆಗೆ ಹೆಚ್ಚುವರಿಯಾಗಿ ನೀಡುತ್ತಿದ್ದ 4,000 ರೂ.ಗಳಿಗೂ ಕತ್ತರಿ ಪ್ರಯೋಗವಾಗಿದೆ. ಸಿದ್ದರಾಮಯ್ಯನವರು ಬಾಯಿ ತೆಗೆದರೆ ದಲಿತ ಮತ್ತು ಆದಿವಾಸಿಗಳ ಕಲ್ಯಾಣದ ಬಗ್ಗೆ ಮಾತನಾಡುತ್ತಾರೆ. ಆದರೆ, ಅದು ಬರೀ ಬಾಯಿಮಾತಿಗೆ ಸೀಮಿತವಾಗಿದೆ ಎಂದರು.

ದಲಿತರಿಗೆ ಮೀಸಲಿಟ್ಟಿದ 11,144ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಲು ವರ್ಗಾಯಿಸಿದೆ. ದಲಿತರ ಹಿತ ಬಲಿ ಕೊಟ್ಟು ಕಾಂಗ್ರೆಸ್ ತನ್ನ ಸ್ವಾರ್ಥ ಸಾಧನೆ ಪೂರೈಸಿಕೊಂಡು ಢೋಂಗಿ ದಲಿತ ಕಾಳಜಿ ಪ್ರದರ್ಶಿಸುತ್ತಿದೆ ಎಂದು ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯ ಉಪಾಧ್ಯಕ್ಷ, ಮಾಜಿ ಶಾಸಕ ಬಸವರಾಜ ನಾಯ್ಕ ಆಕ್ರೋಶ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಗಳಿಗೆ ಹಣ ನೀಡಲು 2024-25ನೇ ಮುಂಗಡ ಪತ್ರದಲ್ಲಿ ಮತ್ತೆ ಹನ್ನೊಂದು ಸಾವಿರ ಕೋಟಿ ರೂ. ಅನುದಾನ ಕಡಿತಗೊಳಿಸಲಾಗಿದೆ. ಸಂವಿಧಾನ ಜಾಥಾ ಮಾಡುತ್ತಿರುವ ಸರ್ಕಾರ, ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ದಲಿತರಿಗೆ ಸೇರಬೇಕಾದ ಅನುದಾನವನ್ನು ನಿರಾಕರಿಸಿ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದರು.

ದಲಿತರ ಹಿತಾಸಕ್ತಿಗಿಂತ ಮತ ಬ್ಯಾಂಕ್ ರಾಜಕಾರಣ ಸರ್ಕಾರಕ್ಕೆ ಆದ್ಯತೆಯಾಗಿರುವುದು ಶೋಚನೀಯ ಸಂಗತಿ. ಸಿದ್ದರಾಮಯ್ಯನವರು ಅಲ್ಪಸಂಖ್ಯಾತರಿಗೆ 10,000 ಕೋಟಿ ಹಣ ವೆಚ್ಚ ಮಾಡಲು ಮಾತ್ರ ಯಾವ ಗ್ಯಾರಂಟಿ ಯೋಜನೆಯೂ ಅಡ್ಡಿಯಾಗಿಲ್ಲ ಎಂದು ಬಿಜೆಪಿ ಎಸ್.ಟಿ. ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಆರೋಪಿಸಿದರು.

ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್, ಮಾಜಿ ಮುಖ್ಯ ಸಚೇತಕ ಡಾ. ಶಿವಯೋಗಿಸ್ವಾಮಿ, ಪಾಲಿಕೆ ವಿರೋಧ ಪಕ್ಷದ ನಾಯಕ ಕೆ. ಪ್ರಸನ್ನ ಕುಮಾರ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಧನಂಜಯ ಕಡ್ಲೇಬಾಳ್, ಐರಣಿ ಅಣ್ಣೇಶ್, ಕೊಳೇನಹಳ್ಳಿ ಬಿ.ಎಂ. ಸತೀಶ್, ಅನಿಲ್ ಕುಮಾರ್ ನಾಯಕ್, ಅನೀತ ಕುಮಾರ ಜಿ. ಎಸ್, ಎಸ್.ಟಿ. ವೀರೇಶ್, ವೀರೇಶ್ ಹನಗವಾಡಿ, ಬಾತಿ ವೀರೇಶ್, ಮಂಜಾನಾಯಕ, ವಿಶ್ವಾಸ್ ಹೆಚ್.ಪಿ, ಶಿವನಗೌಡ ಟಿ. ಪಾಟೀಲ್, ಹನುಮಂತ ನಾಯಕ, ಗಂಗಾಧರ ಜಿ.ವಿ., ಕೃಷ್ಣಪ್ಪ, ಪಿ.ಸಿ. ಶ್ರೀನಿವಾಸ್, ಬೇತೂರ್ ಸಂಗಪ್ಪ, ಕೊಟ್ರೇಶ್ ಗೌಡ, ಚಂದ್ರಕಲಾ, ರೂಪಾ ಕಾಟ್ವೆ ಇತರರು ಪ್ರತಿಭಟನೆಯಲ್ಲಿದ್ದರು.

# ಹೊಸಭರಂಪುರ ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನದ ಗೋಪುರಕ್ಕೆ ಚಾಲನೆ




ಹರಿಹರ, ಫೆ. 23- ನಗರದ ಹೊಸ ಭರಂಪುರ ಬಡಾವಣೆಯ ಶ್ರೀ ಚೌಡೇಶ್ವರಿ ದೇವಸ್ಥಾನದ ಗೋಪುರ ಕಟ್ಟಡ ನಿರ್ಮಾಣ ಕಾಮಗಾರಿಗೆ ಪೂಜೆ ಮಾಡುವ ಮೂಲಕ ಚಾಲನೆ ನೀಡಲಾಯಿತು.

ಈ ವೇಳೆ ಚೌಡೇಶ್ವರಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಸುರೇಶ್ ಚಂದಪೂರ್ ಮಾತನಾಡಿ, ಶ್ರೀ ಚೌಡೇಶ್ವರಿ ದೇವಸ್ಥಾನದ ಗೋಪುರ ನಿರ್ಮಾಣ ಕಾರ್ಯವನ್ನು ಬಹಳ ದಿನಗಳ ಕೆಳಗೆ ಆರಂಭ ಮಾಡಬೇಕೆಂದು ತೀರ್ಮಾನ ಮಾಡಲಾಗಿತ್ತು. ಆದರೆ, ಹಲವಾರು ಅಡೆತಡೆಗಳು ಬಂದಿದ್ದರಿಂದ ಸ್ವಲ್ಪ ದಿನಗಳ ಕಾಲ ತಡವಾಯಿತು. ಸುಮಾರು 15 ಲಕ್ಷ ರೂಪಾಯಿ ವೆಚ್ಚದಲ್ಲಿ ಚೌಡೇಶ್ವರಿ ಅಮ್ಮನವರ ದೇವಸ್ಥಾನ ಗೋಪುರ ನಿರ್ಮಾಣ ಮಾಡಲು ಈಗಾಗಲೇ ತೀರ್ಮಾನ ಮಾಡಿ ಇಂದು ಪೂಜೆ ಮಾಡುವ ಮೂಲಕ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರೇವಣಪ್ಪ ದ್ಯಾವನೇಕರ, ಚೂರಿ ಜಗದೀಶ್, ನಾಗೇನಹಳ್ಳಿ ಹನುಮಂತಪ್ಪ, ರವಿಕುಮಾರ್, ರಾಮು ಯಕ್ಕನಹಳ್ಳಿ, ಊರಮ್ಮ ದೇವಸ್ಥಾನದ ಧರ್ಮದರ್ಶಿ ಎಂ.ಚಿದಾನಂದ ಕಂಚಿಕೇರಿ, ಸಿಂಗಾಡಿ ಸಿದ್ದಪ್ಪ, ಬಸವರಾಜ್ ಸಿಂಗಾಡಿ, ಕೃಷ್ಣಪ್ಪ, ಶಿವಪುತ್ರಪ್ಪ, ಮಹಾರುದ್ರಪ್ಪ ಹಾವನೂರು, ಚಂದ್ರಪ್ಪ ಕೊಂಡಜ್ಜಿ, ಮಂಜುನಾಥ್ ದಾಸರ, ಕಾಗದವರ ಕುಮಾರ್, ಹಾವನೂರು ವೀರೇಶ್, ದೇವರಾಜ್ ದ್ಯಾವನೇಕರ ಇತರರು ಹಾಜರಿದ್ದರು.

# ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಇಂದು



ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ವತಿಯಿಂದ ನಡೆಯುತ್ತಿರುವ 'ತರಳಬಾಳು ಹುಣ್ಣಿಮೆ ಮಹೋತ್ಸವ'ದಲ್ಲಿ ಇಂದು ಸಂಜೆ 6 ಗಂಟೆಗೆ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ, ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶಾಸಕರುಗಳಾದ ಡಿ.ಜಿ. ಶಾಂತನಗೌಡ, ಹೆಚ್.ಎಂ. ಗಣೇಶ್ ಪ್ರಸಾದ್, ವಿಜಯ ನಗರ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್, ಪ್ರೊ. ಗಿಲ್ ಬೆನ್ ಹೆರುಟ್ (ಇಸ್ರೇಲ್) ಅತಿಥಿಗಳಾಗಿದ್ದಾರೆ.

'ಕುವೆಂಪು ಮತ್ತು ವಿಶ್ವ ಮಾನವ ಸಂದೇಶ' ಕುರಿತು ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದ ಗೌಡ ಮತ್ತು 'ಗುರು ಮಹಿಮೆ' ವಿಷಯ ಕುರಿತು ಹಿರೇಮಗಳೂರು ಕಣ್ಣನ್ ಅವರುಗಳು ಉಪನ್ಯಾಸ ನೀಡುವರು. ಇದೇ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಪಿಯರ್ ಸಿಲ್ವನ್ ಫಿಲಿಯೋಜಾ, ಶ್ರೀಮತಿ ವಸುಂಧರಾ ಫಿಲಿಯೋಜಾ (ಪ್ಯಾರೀಸ್), ವೀರ ಹುತಾತ್ಮಯೋಧ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ತಾಯಿ - ತಂದೆ ಶ್ರೀಮತಿ ಕೆ.ಪಿ. ಅನುರಾಧ, ಎಂ. ವೆಂಕಟೇಶ್ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಗುತ್ತದೆ.

# ನಗರದಲ್ಲಿ ಇಂದು 'ಬ್ರದರ್ಸ್ ಕ್ಲಾಸಿಕ್ 2024' ದೇಹದಾರ್ಢ್ಯ ಸ್ಪರ್ಧೆ

ದಾವಣಗೆರೆ, ಫೆ.23- ದಾವಣಗೆರೆ ಅಸೋಸಿಯೇಷನ್ ಆಫ್ ಬಾಡಿ ಬಿಲ್ಡರ್ಸ್ ಹಾಗೂ ಬಿಲಾಲ್ ಮತ್ತು ಟೀಮ್ ಬ್ರದರ್ಸ್ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 24ರ ಶನಿವಾರ ಸಂಜೆ 5 ಗಂಟೆಗೆ 'ಬ್ರದರ್ಸ್ ಕ್ಲಾಸಿಕ್ 2024' ಅಂತರ್ ಜಿಲ್ಲಾ ಮಟ್ಟದ ತೂಕ ವಿಭಾಗದ ದೇಹದಾರ್ಢ್ಯ ಸ್ಪರ್ಧೆ ನಡೆಯಲಿದೆ.

ಶುಕ್ರವಾರ ಈ ವಿಷಯ ಕುರಿತು ಮಾಹಿತಿ ನೀಡಿದ ಆಯೋಜಕ ಬಿಲಾಲ್, ವಿನೋಬನಗರದ ಅಮಿತ್ ಥಿಯೇಟರ್ ಆವರಣದಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ವಿವಿಧ ಜಿಲ್ಲೆಗಳಿಂದ 80-100 ಜನರು ಆಗಮಿಸುವ ನಿರೀಕ್ಷೆ ಇದೆ. ವಿಜೇತರಿಗೆ ಆಕರ್ಷಕ ಟ್ರೋಫಿಯೊಂದಿಗೆ 1,11,111 ರೂ.ವರೆಗೂ ನಗದು ಬಹುಮಾನ ನೀಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ದಾವಣಗೆರೆ ಅಸೋಸಿಯೇಷನ್ ಆಫ್ ಬಾಡಿ ಬಿಲ್ಡರ್ಸ್ ಅಧ್ಯಕ್ಷ ಮಹೇಶ್ ಕೆ.ಎಂ., ಪ್ರಧಾನ ಕಾರ್ಯದರ್ಶಿ ಸಂತೋಷ್ ಏಕಬೋಟೆ ಸೇರಿದಂತೆ ಸುಲ್ತಾನ್ ಅಹ್ಮದ್, ಎಂ.ಜಾಫರ್ ಸಾಧಿಕ್, ನದೀಮ್ ಖಾನ್ ಇತರರು ಉಪಸ್ಥಿತರಿದ್ದರು.

## ಓದುಗರ ಪತ್ರ

### ಕುಸಿಯುತ್ತಿರುವ ನೈತಿಕ ಮೌಲ್ಯಗಳು

ಮಾನ್ಯರೆ,

ಇಂದಿನ ನಮ್ಮ ಜೀವನ ಯಾಂತ್ರಿಕವಾಗಿದೆ, ನಮ್ಮ ನೈತಿಕ ಮೌಲ್ಯಗಳು ನಮ್ಮಿಂದ ದೂರವಾಗುತ್ತಿವೆ, (ಕುಸಿಯುತ್ತಿವೆ) ನಾವು ನಮ್ಮ ಬದುಕನ್ನು ಇಂದಿನ ನಮಗಾಗಿ ಕಾಯಬೇಕು ಮಾತ್ರವಲ್ಲ ನಾಳಿನ ನಮ್ಮ ಸಂತತಿಗಾಗಿ ಕಾಯುವುದಕ್ಕೂ ಬದ್ಧರು ಎಂಬ ಪ್ರಜ್ಞೆಯಿಂದ ವರ್ತಿಸಬೇಕಾಗಿದೆ,

ಇಂದಿನ ನಮ್ಮ ಸ್ಥಿತಿ, ಮನೋಧರ್ಮ, ನಡೆ-ನುಡಿ, ನಡವಳಿಕೆ ನಮ್ಮ ಪೂರ್ವಜರ ಭವ್ಯ ಬದುಕಿನ ಇತಿಹಾಸವನ್ನು, ಪರಂಪರೆಯನ್ನು ಮರೆತು ಬದುಕುತ್ತಿದ್ದೇವೆ. ನಮ್ಮ ಮುಂದಿನ ಪೀಳಿಗೆಗೆ ಅವರ ಭವಿಷ್ಯ ರೂಪಿಸಿಕೊಳ್ಳಲು ಸರಿಯಾದ ಮಾರ್ಗವನ್ನು ತೋರಿಸದೇ ಸ್ವಾರ್ಥದಿಂದ ಏನೆಲ್ಲವನ್ನು ಮರೆತು ಬದುಕುತ್ತಿದ್ದೇವೆ. ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿ, ಪರಂಪರೆ, ನಮ್ಮ ಪೂರ್ವಜರು ಬದುಕಿದ ಜೀವನದ ಮೌಲ್ಯಗಳನ್ನು ತಿಳಿಸಿಕೊಡುತ್ತಿಲ್ಲ, ನಮ್ಮ ಮನೋಧರ್ಮ ಮನೋವಿಕಾರಗೊಳ್ಳುತ್ತಿದೆ. ನಾಳಿನ ಬದುಕಿಗೆ ನಮ್ಮ ಕನಸುಗಳು ಸಾಕಾರಗೊಳ್ಳದೇ ಔದಾಸೀನ್ಯವನ್ನು, ಅಂಧ ಶ್ರದ್ದೆಯನ್ನು ನಿರ್ಮಾಣ ಮಾಡುತ್ತಿವೆ. ನಾವಿಂದು ಎಚ್ಚರಗೊಳ್ಳದಿದ್ದರೆ ಮುಂದಿನ ಬದುಕು ? ಬಲು ಜೋಕೆ !

- ಜೆಂಬಿಗಿ ಮೃತ್ಯುಂಜಯ, ದಾವಣಗೆರೆ

# ದೇಶ, ಸಂವಿಧಾನ ಉಳಿಯಲು ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು

## ಜಿಲ್ಲಾ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಕೆಪಿಸಿಸಿ ವೀಕ್ಷಕ ಪಿ. ಆರ್ ರಮೇಶ್



ದಾವಣಗೆರೆ,ಫೆ.23- ದೇಶ ಹಾಗೂ ಸಂವಿಧಾನ ಉಳಿಯಬೇಕಾದರೆ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತನ್ನಿ ಎಂದು ಕೆಪಿಸಿಸಿ ವೀಕ್ಷಕ ಪಿ. ಆರ್ ರಮೇಶ್ ಅಭಿಪ್ರಾಯಪಟ್ಟರು.

ಜಿಲ್ಲಾ ಕಾಂಗ್ರೆಸ್‌ನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಮುಂಚೂಣಿ ಘಟಕಗಳ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಮುಖಂಡರುಗಳ ಸಭೆಯಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಏಳು ವಿಧಾನಸಭೆ ಹಾಗೂ ವಿಜಯನಗರ ಜಿಲ್ಲೆಯ ಹರಪನಹಳ್ಳಿ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬೂತ್ ಮಟ್ಟದ ರಚನೆ ಸಂಬಂಧ ಕರೆಯಲಾಗಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು ಸಂವಿಧಾನದ 73, 74ಕ್ಕನೇ ತಿದ್ದುಪಡಿ ತಂದ ಪರಿಣಾಮ ಇಂದು ಶ್ರೀ ಸಾಮಾನ್ಯನೂ ಕೂಡ ಉನ್ನತ ಹುದ್ದೆಗೆ ಏರಲು ಸಾಧ್ಯವಾಗಿದೆ ಎಂದು ತಿಳಿಸಿದರು

ಕೆಪಿಸಿಸಿ ಉಸ್ತುವಾರಿ ಡಿ.ಬಸವರಾಜ್ ಮಾತನಾಡಿ, ಬರಲಿರುವ ದಾವಣಗೆರೆ ಲೋಕಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ಶತಸಿದ್ಧ. ಅದಕ್ಕಾಗಿ ಶ್ರಮಿಸಿ ಎಂದು ಮನವಿ ಮಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್. ಬಿ. ಮಂಜಪ್ಪ ಮಾತನಾಡಿ, ಆದಷ್ಟು ಬೇಗನೆ ದಾವಣಗೆರೆ ಲೋಕಸಭೆ ವ್ಯಾಪ್ತಿಯ ಎಲ್ಲಾ ಬೂತ್‌ಗಳ ಪ್ರತಿನಿಧಿಗಳನ್ನು ನೇಮಿಸಬೇಕೆಂದು ಬ್ಲಾಕ್ ಅಧ್ಯಕ್ಷರುಗಳಲ್ಲಿ ವಿನಂತಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಕೆ. ಜಿ. ಶಿವ ಕುಮಾರ್, ಮಲೇಬೆನ್ನೂರು ಅಭಿದ್ ಅಲಿ, ಹರಪನಹಳ್ಳಿ ಎಂ. ವಿ ಅಂಜಿನಪ್ಪ, ಚನ್ನಗಿರಿ ಶ್ರೀನಿವಾಸ್, ಮಾಗಾನಹಳ್ಳಿ ಪರಶುರಾಮ್, ಜಗಳೂರಿನ ಶಂಷೀರ್ ಅಲಿ, ಹೊನ್ನಾಳಿ ಶಿವಯೋಗಿ, ಸಾಸ್ವೆಹಳ್ಳಿ ಆರ್. ನಾಗಪ್ಪ, ಸಂತೆಬೆನ್ನೂರಿನ ಮೊಹ್ಮದ್ ಜಬೀಉಲ್ಲಾ, ಹರಿಹರದ ಎಲ್. ಬಿ. ಹನುಮಂತಪ್ಪ, ಜಿಲ್ಲಾ ಕಾಂಗ್ರೆಸ್ ಘಟಕಗಳ ಅಧ್ಯಕ್ಷರಾದ ಕೆ. ಎಂ. ಮಂಜುನಾಥ್, ಡೋಲಿ ಚಂದ್ರು, ನಂಜಾನಾಯ್ಕ್, ಬಿ. ಎನ್. ವಿನಾಯಕ, ಲಿಯಾಖತ್ ಅಲಿ, ರುದ್ರೇಶ್, ಸಮಿಉಲ್ಲಾ, ಹರೀಶ್, ನವೀನ್ ಸೇರಿದಂತೆ, ಇತರರು ಹಾಜರಿದ್ದರು.

# ನಗರದಲ್ಲಿ ಇಂದು ದಸಂಸ 50ನೇ ವರ್ಷದ ಸಂಸ್ಥಾಪನಾ ದಿನದ ಸಂಭ್ರಮ

ದಾವಣಗೆರೆ, ಫೆ.23- ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಮಿತಿ ವತಿಯಿಂದ 50ನೇ ವರ್ಷದ ಸಂಸ್ಥಾಪನಾ ದಿನದ ಸಂಭ್ರಮೋತ್ಸವವನ್ನು ನಾಳೆ ದಿನಾಂಕ 24ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ ತಿಳಿಸಿದ್ದಾರೆ. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಮಿತಿಯ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಶಿವಮೊಗ್ಗ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಪ್ರೊ.ಬಿ. ಕೃಷ್ಣಪ್ಪನವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬುಳಸಾಗರ ಸಿದ್ರಾಮಣ್ಣ, ವಿಜಯಮ್ಮ, ಪ್ರದೀಪ್ ಕೆಟಿಜೆ ನಗರ, ಮಂಜುನಾಥ, ಅಣಜಿ ಹನುಮಂತಪ್ಪ, ಮೆಳ್ಳೇಕಟ್ಟೆ ಪರಶುರಾಮಪ್ಪ, ಕೊಡಗನೂರು ಲಕ್ಷ್ಮಣ್, ಬೇತೂರು ಹನುಮಂತಪ್ಪ, ಶಂಕರ್, ಆವರಗೊಳ್ಳ ದೊಡ್ಡಪ್ಪ ಇತರರು ಉಪಸ್ಥಿತರಿದ್ದರು.

# ಮಲೇಬೆನ್ನೂರು : ಖವ್ವಾಲಿ ನೋಡಲು ಜನಸಾಗರ




ಮಲೇಬೆನ್ನೂರು, ಫೆ. 23- ಸೌಹಾರ್ದತೆ ಸಾರುವ ಪಟ್ಟಣದ ಪ್ರಸಿದ್ಧ ಹಜರತ್ ಹಬೀಬುಲ್ಲಾ ಷಾ ಖಾದ್ರಿ ಅವರ ಗಂಧ ಮತ್ತು ಉರುಸು ಅಂಗವಾಗಿ ಗುರುವಾರ ರಾತ್ರಿ ದರ್ಗಾ ಆವರಣದಲ್ಲಿ ಹಮ್ಮಿಕೊಂಡಿದ್ದ ಖವ್ವಾಲಿ ಕಾರ್ಯಕ್ರಮವನ್ನು ನೋಡಲು ಜನ ಸಾಗರವೇ ಹರಿದು ಬಂದಿತ್ತು.

ಹರಿಹರ, ದಾವಣಗೆರೆ, ರಾಣೇಬೆನ್ನೂರು, ಹಿರೇಕೆರೂರು, ರಟ್ಟಿಹಳ್ಳಿ, ಹಾವೇರಿ, ಹೊನ್ನಾಳಿ, ಚನ್ನಗಿರಿ, ಬಸವಾಪಟ್ಟಣ, ಸಾಸ್ವೆಹಳ್ಳಿ, ಶಿವಮೊಗ್ಗ, ಭದ್ರಾವತಿ ಸೇರಿದಂತೆ ದೂರದ ಊರುಗಳಿಂದ ಜನ ದಾಖಲೆ ಸಂಖ್ಯೆಯಲ್ಲಿ ಮಲೇಬೆನ್ನೂರಿಗೆ ಆಗಮಿಸಿದ್ದರಿಂದ ದರ್ಗಾ ಆವರಣ ತುಂಬಿ ತುಳುಕುತ್ತಿತ್ತು.

ಯುವ ಗಾಯಕ ಉತ್ತರ ಪ್ರದೇಶದ ರಿಯೀಸ್ ಹನೀಫ್ ಅವರ ಖವ್ವಾಲಿ ಜನಮನ ಸೆಳೆಯಿತು. ಈತನ ಹಾಡುಗಳಿಗೆ ಹುಚ್ಚೆದ್ದು ಕುಣಿದ ಯುವಕರು ನೋಟಿನ ಸುರಿಮಳೆ ಸುರಿಸಿ ಖುಷಿಪಟ್ಟರು. ಉತ್ತರ ಪ್ರದೇಶದ ಇನ್ನೋರ್ವ ಗಾಯಕ ಜುನ್ಯೆದ್ ಸುಲ್ತಾನಿ ಅವರ ಖವ್ವಾಲಿ ಕೂಡ ಆಕರ್ಷಣೀಯವಾಗಿತ್ತು.

ಖವ್ವಾಲಿ ನೋಡಲು ಜನ ತಡರಾತ್ರಿ 1 ಗಂಟೆವರೆಗೂ ಕಾರು, ಆಟೋಗಳಲ್ಲಿ ಆಗಮಿಸುತ್ತಲೇ ಇದ್ದರು. ಇದರಿಂದಾಗಿ ಪಟ್ಟಣದ ಹೆದ್ದಾರಿ ಉದ್ದಕ್ಕೂ ಮತ್ತು ಬಸ್ ನಿಲ್ದಾಣ, ನಿಟ್ಟೂರು ರಸ್ತೆ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಸಾವಿರಾರು ವಾಹನಗಳು ನಿಂತಿದ್ದವು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಜಿಲ್ಲಾ ವಕ್ಫ್ ಕಮಿಟಿ ಶಿರಾಜ್ ಅಹ್ಮದ್, ಉರುಸು ಕಮಿಟಿ ಅಧ್ಯಕ್ಷ ಖುರ್ಬಾನ್ ಅಲಿ, ಬಿ. ರಫೀವುಲ್ಲಾ, ಎಂ.ಜಿ. ಫೈಜು, ಖುದ್ದೂಸ್ ಸಾಬ್, ಶಕ್ತಿ ಸಾಮಿಲ್ ಮುನ್ನಾ, ಶೇರ್ ಅಲಿ, ಸಜ್ಜು, ಯುನೂಸ್, ಭೋವಿಕುಮಾರ್, ಪಿ.ಹೆಚ್. ಶಿವಕುಮಾರ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಕುಂಬಳೂರು ವಾಸು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಪಿಎಸ್‌ಐ ಪ್ರಭು ಕೆಳಗಿನಮನೆ ನೇತೃತ್ವದಲ್ಲಿ ನೂರಾರು ಪೊಲೀಸರು ವಾಹನಗಳ ಹಾಗೂ ಜನರ ನಿಯಂತ್ರಣಕ್ಕೆ ಹರಸಾಹಸಪಟ್ಟರು.

## ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ

# ಕಬಡ್ಡಿ : ದಾಸಪ್ಪ ಹೆಚ್. ಪ್ರಥಮ ಸ್ಥಾನ



ದಾವಣಗೆರೆ, ಫೆ. 23- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಮೊನ್ನೆ ನಡೆದ ದಾವಣಗೆರೆ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಸ್ಥಳೀಯ ನ್ಯಾಯಾಲಯದ ದ್ವಿತೀಯ ದರ್ಜೆ ಸಹಾಯಕ ದಾಸಪ್ಪ ಹೆಚ್. ಅವರು ಕಬಡ್ಡಿಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

ದಾಸಪ್ಪ ಅವರನ್ನು ದಾವಣಗೆರೆ ವಕೀಲರ ಸಹಕಾರ ಸಂಘದ ನಿರ್ದೇಶಕ ಎ.ಸಿ. ರಾಘವೇಂದ್ರ, ಪ್ರಧಾನ ಸಿವಿಲ್ ನ್ಯಾಯಾಲಯದ ಶಿರಸ್ತೇದಾರ ಎನ್. ಮಾರುತಿ ಪ್ರಸಾದ್, ಕೆ.ಎಂ. ಮಂಜುನಾಥ್ ಅಭಿನಂದಿಸಿದ್ದಾರೆ.

# ನಗರದಲ್ಲಿ ಇಂದು ಹುಣ್ಣಿಮೆ ಕಾರ್ಯಕ್ರಮ

ಶ್ರೀ ಅಕ್ಕಮಹಾದೇವಿ ಮಹಿಳಾ ಸಮಾಜದ ವತಿಯಿಂದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 5.30ಕ್ಕೆ ಹುಣ್ಣಿಮೆ ಕಾರ್ಯಕ್ರಮ ನಡೆಯಲಿದೆ.

ಶ್ರೀ ಅಕ್ಕಮಹಾದೇವಿ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕೆ.ಕೆ. ಸುಶೀಲಮ್ಮ ಅಧ್ಯಕ್ಷತೆ ವಹಿಸಲಿದ್ದು, ಚಿಂತಕರಾದ ಶ್ರೀಮತಿ ನೀಲಗುಂದ ಜಯಮ್ಮ ಚಿಂತನ-ಮಂಥನ ಕಾರ್ಯಕ್ರಮವನ್ನು ನಡೆಸಿಕೊಡುವರು. ಕಾರ್ಯದರ್ಶಿ ಶ್ರೀಮತಿ ಸುವರ್ಣ ದೊಗ್ಗಳ್ಳಿ ಮತ್ತು ಪದಾಧಿಕಾರಿಗಳು ಉಪಸ್ಥಿತರಿರುವರು. ಶಿವಾಜಿ ಜಯಂತಿ, ರಥಸಪ್ತಮಿ ಮತ್ತು ಭಾರತ ಹುಣ್ಣಿಮೆ ವಿಷಯಗಳ ಕುರಿತು ಶ್ರೀಮತಿ ಸುಧಾ ಅಜ್ಜಂಪುರ, ಶ್ರೀಮತಿ ಶೋಭಾ ಕಣವಿ, ಶ್ರೀಮತಿ ಆಶಾ ಚಟ್ರಿಕೆ ಅವರುಗಳು ವಿಚಾರ ವಿನಿಮಯ ನಡೆಸುವರು.

**DAVID Coaching Center**
Coaching classes for SSLC students commences
**from 11th March 2024**
CBSE and State Syllabus, Subjects : Maths & Science
***Highlights :*** • 33 years of teching Experience
• Digital classes • Individual attention
• Regular Class test • Printed Notes
• Timely completion syllabus
**Contact : Mr. David** : #2491, MCC A Block, 9th Cross, Near Hair trend Spa Davanagere. **Mob : 94482 33494**

**ಸಾರ್ವಜನಿಕರ ಗಮನಕ್ಕೆ**
**ಶಾಲಾ ಹೆಸರನ್ನು ಬದಲಾವಣೆ ಮಾಡಿರುವ ಬಗ್ಗೆ**



ದಾವಣಗೆರೆಯ ಡಿಸಿಎಂ ಟೌನ್ ಶಿಪ್‌ನ ಮುಖ್ಯ ರಸ್ತೆಯಲ್ಲಿ ಶ್ರೀ ರಾಮಲೀಲಾ ಎಜ್ಯುಕೇಷನ್ ಟ್ರಸ್ಟ್ (ರಿ.) ಇದರ ಅಡಿಯಲ್ಲಿ 2011-12ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಲಿಟ್ಸ್ ಚಾಂಪ್ಸ್ ಶಾಲೆಯನ್ನು ನಡೆಸುತ್ತಿದ್ದು, ಮುಂಬರುವ ಶೈಕ್ಷಣಿಕ ವರ್ಷ 2024-25ನೇ ಸಾಲಿನಿಂದ ಈ ನಮ್ಮ ಲಿಟ್ಸ್ ಚಾಂಪ್ಸ್ ಶಾಲೆಯ ಹೆಸರನ್ನು ಉಪನಿರ್ದೇಶಕರು (ಆಡಳಿತ) ರವರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ, ಇವರ ಅನುಮತಿಯೊಂದಿಗೆ **ಶ್ರೀ ರಾಮಕೃಷ್ಣ ಇಂಟರ್‌ನ್ಯಾಷನಲ್ ಸ್ಕೂಲ್** ಎಂದು ಬದಲಾಯಿಸಿರುತ್ತೇವೆಂದು ಈ ಮೂಲಕ ಹಾಲಿ ನಮ್ಮ ಶಾಲೆಯ ಎಲ್ಲಾ ಪೋಷಕರಿಗೂ ಹಾಗೂ ಸಮಸ್ತ ಸಾರ್ವಜನಿಕರಿಗೂ ಶಾಲೆಯ ಹೆಸರು ಬದಲಾಗಿರುವ ವಿಷಯವನ್ನು ತಿಳಿಸಲು ನಾವುಗಳು ಇಚ್ಛಿಸುತ್ತೇವೆ.

ದಿನಾಂಕ 23.02.2024
ಸ್ಥಳ: ದಾವಣಗೆರೆ

**ಕಾರ್ಯದರ್ಶಿಯವರು**
ಶ್ರೀ ರಾಮಲೀಲಾ ಎಜ್ಯುಕೇಷನ್ ಟ್ರಸ್ಟ್ (ರಿ.)
ಡಿಸಿಎಂ ಟೌನ್ ಶಿಪ್, ದಾವಣಗೆರೆ,
**ಮೊ : 98444 99944**

## ನೀರಾ ತಯಾರಿಕೆ ಅನುಮತಿಗೆ ಪರಿಶೀಲನೆ

ಬೆಂಗಳೂರು, ಫೆ. 23 - ಸೇಂದಿ, ಸಾರಾಯಿ ಉಪ ಕಸುಬಾಗಿಸಿಕೊಂಡಿದ್ದ ಸಮುದಾಯಕ್ಕೆ ನೀರಾ ತಯಾರಿಕೆಗೆ ಅನುಮತಿ ನೀಡುವ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಬಿ.ಕೆ. ಹರಿಪ್ರಸಾದ್ ಮತ್ತಿತರರ ಪ್ರಸ್ತಾವಕ್ಕೆ ಮಧ್ಯೆ ಪ್ರವೇಶಿಸಿ ಮಾತನಾಡಿದ ಅವರು, ಎಸ್.ಎಂ ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಸೆಕೆಂಡ್ಸ್ ಮದ್ಯ ತಡೆಗೆ ಭಾರೀ ಒತ್ತಡ ಬಂದಿತ್ತು ಎಂದರು. ಇದನ್ನು ಕೃಷ್ಣ ಅವರು ಗಂಭಿರವಾಗಿ ತೆಗೆದುಕೊಂಡು ಪಾನೀಯ ನಿಗಮ ಆರಂಭಿಸಿದ್ದು, ಇಂದು ದೊಡ್ಡ ಪ್ರಮಾಣದಲ್ಲಿ ಪಾನೀಯ ನಿಗಮದಿಂದ ಆದಾಯ ಬರುತ್ತಿದೆ ಎಂದು ಹೇಳಿದರು.

ಸೇಂದಿ ಮತ್ತು ಸಾರಾಯಿ ನಿಷೇಧದ ನಂತರ ಈ ಕಸುಬಿನಲ್ಲಿ ತೊಡಗಿಸಿಕೊಂಡಿದ್ದವರಿಗೆ ಪರ್ಯಾಯ ವ್ಯವಸ್ಥೆಗೆ ಸರ್ಕಾರ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ, ಆದರೂ ಅಪಸ್ವರ ಕೇಳಿಬಂದ ಹಿನ್ನೆಲೆಯಲ್ಲಿ ನೀರಾ ಮಾರಾಟಕ್ಕೆ ಅನುಮತಿ ನೀಡುವ ಮೂಲಕ ಅವರ ಬದುಕಿಗೆ ದಾರಿ ಮಾಡಿಕೊಡುವ ಚಿಂತನೆ ಇದೆ ಎಂದರು.

# ರಾಮನಂತಹ ಪತಿ ಇದ್ದರೂ ಸೀತೆಗೆ ಕಷ್ಟ ತಪ್ಪಲಿಲ್ಲ

### ತರಳಬಾಳು ಹುಣ್ಣಿಮೆ ಮಹಿಳಾ ಚಿಂತನ ಗೋಷ್ಠಿಯಲ್ಲಿ ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮೀಜಿ

ಸಿರಿಗೆರೆ, ಫೆ. 23 – ಮಹಿಳೆಯರು ಸೀತಾಮಾತೆಯ ಕಾಲದಿಂದಲೂ ಅಪಾರ ಕಷ್ಟಗಳನ್ನು ಎದುರಿಸುತ್ತಾ ಬಂದಿದ್ದಾರೆ. ಮಹಿಳೆಯರು ಜಾಗೃತಿಯಾಗುವ ಮೂಲಕ ಈ ಕಷ್ಟಗಳಿಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಹಂಪಿಯ ಶ್ರೀ ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮೀಜಿ ತಿಳಿಸಿದರು.

ಚಿತ್ರದುರ್ಗ ಜಿಲ್ಲೆಯ ಸಿರಿಗೆರೆಯ ತರಳಬಾಳು ಮಠದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಎರಡನೇ ದಿನದಂದು ಮಹಿಳಾ ಚಿಂತನ ಗೋಷ್ಠಿಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ಸೀತಾ ಮಾತೆಯನ್ನು ನಾವೆಲ್ಲರೂ ಆದರ್ಶವಾಗಿ ಕಾಣುತ್ತೇವೆ. ಸೀತೆಗೆ ರಾಮನಂತಹ ಪುರುಷ ರತ್ನ ಪತಿ ಇದ್ದ. ಲವ – ಕುಶರಂತಹ ಪುತ್ರ ರತ್ನರಿದ್ದರು. ಸೀತೆ ಸಾಕ್ಷಾತ್ ಪಟ್ಟದರಿಸಿಯೇ ಆಗಿದ್ದಳು. ಆದರೂ, ಭೂತಾಯಿ ನಿನ್ನ ಗರ್ಭದಲ್ಲಿ ಸೇರಿಸಿಕೋ ಎಂದು ಕೇಳುವ ಪರಿಸ್ಥಿತಿ ಎದುರಾಯಿತು. ಹೆಣ್ಣು ಮಕ್ಕಳಿಗೆ ಇಷ್ಟೊಂದು ಸಮಸ್ಯೆಗಳಿರುತ್ತವೆ ಎಂದು ಶ್ರೀಗಳು ಹೇಳಿದರು.

ಹೆಣ್ಣು ಮಕ್ಕಳು ಎದುರಿಸುವ ಸಮಸ್ಯೆಗಳು ಗಂಡಿಗೆ ಅರ್ಥವಾಗುವುದಿಲ್ಲ. ಸಮಸ್ಯೆಗಳಿಗೆ ಕೊನೆ ಎಂಬುದೂ ಇರುವುದಿಲ್ಲ. ಆದರೂ, ಈ ಸಮಸ್ಯೆಗಳಿಗೆ ನಾವೇ ಪರಿಹಾರ ಕಂಡುಕೊಳ್ಳಬೇಕಿದೆ. ಅಂಧಾನುಕರಣೆ ಮಾಡದೇ, ಜಾಗೃತರಾಗುವ ಮೂಲಕ ಜೀವನ ಅನುಭವಿಸುವುದನ್ನು ಕಲಿಯಬೇಕಿದೆ ಎಂದು ಶ್ರೀಗಳು ತಿಳಿಸಿದರು.

ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಮಾತನಾಡಿ, ಮಹಿಳೆಯರು ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕವಾಗಿ ಸಬಲರಾಗಲು ಶಿಕ್ಷಣ ಬೇಕಿದೆ. ಸಾಕ್ಷರತೆ, ಆತ್ಮವಿಶ್ವಾಸ ಹಾಗೂ ಕೌಶಲ್ಯಗಳ ನೆರವಿನಿಂದ ಸಬಲೀಕರಣ ಸಾಧ್ಯ ಎಂದು ಹೇಳಿದರು.

ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಮಾತನಾಡಿ, ನಾಡಿನ ಕೆರೆಗಳಿಗೆ ನೀರು ತುಂಬಿಸುವ ಮೂಲಕ ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ರೈತರ ಬಾಳಿಗೆ ಬೆಳಕಾಗಿದ್ದಾರೆ ಎಂದರು.

ಎಸ್.ಎಸ್. ಕೇರ್ ಟ್ರಸ್ಟ್ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಉತ್ತಮ ಜೀವನ ಶೈಲಿ ಹಾಗೂ ಆಹಾರ ಪದ್ಧತಿಗಳಿಂದ ರೋಗಗಳಿಂದ ದೂರವಿರಬೇಕಿದೆ. ಮಕ್ಕಳ ಸಮಗ್ರ ಕಲಿಕೆಗಾಗಿ ಆಟ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳೂ ಅಗತ್ಯ ಎಂಬುದನ್ನು ಪೋಷಕರು ಅರಿಯಬೇಕಿದೆ. ಮೊಬೈಲ್ ಬಳಕೆ ಕಡಿಮೆ ಮಾಡಿ ಕುಟುಂಬದ ಸದಸ್ಯರ ಜೊತೆ ಹೆಚ್ಚು ಸಮಯ ಕಳೆಯಬೇಕು ಎಂದು ಕಿವಿಮಾತು ಹೇಳಿದರು.

ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ಸೂಕ್ಷ್ಮಾಣು ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಜಿ. ಉಷಾ ಮಾತನಾಡಿ, ಸೋಂಕು ರೋಗ ತಡೆಗಾಗಿ ಆಹಾರ ತಯಾರಿಕೆಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಕಲುಷಿತ ಆಹಾರ ಹಾಗೂ ನೀರಿನಿಂದ ಸೋಂಕು ಬರದಂತೆ ಎಚ್ಚರಿಕೆ ವಹಿಸಬೇಕು. ಸುತ್ತಲಿನ ಪರಿಸರ ಹಾಗೂ ವೈಯಕ್ತಿಕ ನೈರ್ಮಲ್ಯದಿಂದ ಸೋಂಕು ರೋಗ ಹರಡುವಿಕೆ ತಡೆಯಬಹುದು ಎಂದರು.

### ಇಚ್ಛೆ ಅರಿಯುವ ಸತಿಗೆ ತಕರಾರು

ಬೆಚ್ಚನೆಯ ಮನೆಯಿರಲು ವೆಚ್ಚಕ್ಕೆ ಹೊನ್ನಿರಲು ಇಚ್ಛೆಯನರಿವ ಸತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ ಎಂಬ ಸರ್ವಜ್ಞನ ತ್ರಿಪದಿಗೆ ತಮ್ಮ ತಕರಾರು ಇದೆ ಎಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು ಬೇಕು ಎಂಬುದರಲ್ಲಿ ತಪ್ಪಿಲ್ಲ. ಆದರೆ, ಪತ್ನಿ ತನ್ನ ಇಚ್ಛೆಯಂತೆಯೇ ನಡೆದುಕೊಳ್ಳಬೇಕು ಎಂದು ಹೇಳುವುದು ಪುರುಷರ ದೌರ್ಜನ್ಯ ಎಂದು ಶ್ರೀಗಳು ಹೇಳಿದರು.

'ಗಂಡನಿಗೆ ಬೇಡವಾದದ್ದು ಗುಂಡು ಕಲ್ಲಿಗೂ ಬೇಡ' ಎಂಬ ಗಾದೆ ಮಾತೂ ಇದೆ. ಆದರೆ, ಕೆಲವು ಗಂಡಂದಿರು ಗುಂಡು ಕಲ್ಲಿಗೆ ಹಾಕಿ ತಿರುವಬೇಕು ಎಂದು ಆಕ್ರೋಶ ತರಿಸುವ ರೀತಿ ಇರುತ್ತಾರೆ ಎಂದೂ ಶ್ರೀಗಳು ತಿಳಿಸಿದರು.

ಇತ್ತೀಚಿಗೆ ಹೆಣ್ಣು ಮಕ್ಕಳಲ್ಲಿ ಪ್ರಜ್ಞಾವಂತಿಕೆ ಹೆಚ್ಚಾಗುತ್ತಿದೆ. ಹೆಣ್ಣು ಮಕ್ಕಳೇ ಈಗ ಹೆತ್ತವರಿಗೆ ಆಸರೆಯಾಗುತ್ತಿದ್ದಾರೆ ಎಂದವರು ತಿಳಿಸಿದರು.

## ಹರಿಹರದಲ್ಲಿ ಇಂದು ಹರಿಹರೇಶ್ವರ ಸ್ವಾಮಿ ಬ್ರಹ್ಮರಥೋತ್ಸವ



ಐತಿಹಾಸಿಕ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿ ಬ್ರಹ್ಮರಥೋತ್ಸವವು ಇಂದು ಬೆಳಿಗ್ಗೆ 11.25 ಕ್ಕೆ ನಡೆಯಲಿದೆ ಎಂದು ತಹಶೀಲ್ದಾರ್ ಕೆ.ಎಂ. ಗುರುಬಸವರಾಜ ತಿಳಿಸಿದ್ದಾರೆ.

ಬ್ರಹ್ಮ ರಥೋತ್ಸವ ನಿಮಿತ್ತವಾಗಿ ನಾಳೆ ದಿನಾಂಕ 25 ರಂದು ಬೆಳಗಿನ ಪೂಜೆ ಕಾರ್ಯಗಳ ನಂತರ ಸಂಜೆ 6 ಗಂಟೆಗೆ ಶ್ರೀ ಪದ್ಮಭಾಸ್ಕರ ನೃತ್ಯ ಕಲಾ ಕೇಂದ್ರ (ಧಾರವಾಡ) ತಂಡದವರಿಂದ ಭಾರತ ನಾಟ್ಯ, ಸೇರಿದಂತೆ ಹಲವಾರು ಕಾರ್ಯಕ್ರಮಗಳು ನಡೆಯುತ್ತವೆ.

## ನಗರದಲ್ಲಿಂದು ರೇಣುಕಾ ಯಲ್ಲಮ್ಮದೇವಿ ಭರತ ಹುಣ್ಣಿಮೆ ಜಾತ್ರಾ ಮಹೋತ್ಸವ




ಯಲ್ಲಮ್ಮ ನಗರದಲ್ಲಿರುವ ಶ್ರೀ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನ ಸೇವಾ ಸಮಿತಿಯಿಂದ ಶ್ರೀ ಜಗನ್ಮಾತೆ ರೇಣುಕಾಂಬಿಕಾ ಯಲ್ಲಮ್ಮದೇವಿಯ 24ನೇ ವರ್ಷದ ಭರತ ಹುಣ್ಣಿಮೆ ಜಾತ್ರಾ ಮಹೋತ್ಸವವನ್ನು ಇಂದು ಬೆಳಿಗ್ಗೆ 7 ರಿಂದ 10.30ರವರೆಗೆ ಹಮ್ಮಿಕೊಳ್ಳಲಾಗಿದೆ. 12.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ದೇವಸ್ಥಾನ ಸಮಿತಿಯವರು ತಿಳಿಸಿದ್ದಾರೆ.

## ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ವಿಶೇಷ ಪೂಜೆ



ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಭಾರತ ಹುಣ್ಣಿಮೆ (ಗುರು ಪೂರ್ಣಿಮೆ) ಪ್ರಯುಕ್ತ ಇಂದು ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ನಾಗರತ್ನ, ಶಶಿಧರ್ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ನಗರದಲ್ಲಿ ಇಂದು - ನಾಳೆ ಆರೋಗ್ಯಕ್ಕಾಗಿ ಶಿಬಿರ



ಭಗವತಿ ಚೈತನ್ಯ ಚಿಕಿತ್ಸೆ ಮತ್ತು ಧ್ಯಾನ ಕೇಂದ್ರದ ಆಶ್ರಯದಲ್ಲಿ ಇಂದು ಮತ್ತು ನಾಳೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ಮಹಾ ಧ್ಯಾನ ಉತ್ತಮ ಆರೋಗ್ಯಕ್ಕೆ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಶಿಬಿರ ನಡೆಸಿಕೊಡುವ ಸಂಸ್ಥೆಯ ಸಂಸ್ಥಾಪಕರಾದ ಹಿಮಾಲಯ ಯೋಗಿಗಳಾದ ಅಘೋರಿ ಚಿದಂಬರ ಯೋಗಿ ತಿಳಿಸಿದ್ದಾರೆ. ಎಂ.ಸಿ.ಸಿ. 'ಬಿ' ಬ್ಲಾಕ್‌ನ 2ನೇ ಮುಖ್ಯ ರಸ್ತೆ, 1ನೇ ತಿರುವಿನಲ್ಲಿರುವ ಡಾ. ಎಲಿ ಕ್ಲಿನಿಕ್ ಕಟ್ಟಡದ ಮೊದಲನೇ ಮಹಡಿಯ ಸಭಾಂಗಣದಲ್ಲಿ ನಡೆಯಲಿರುವ ಒಳ್ಳೆಯ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕಾಗಿ ಈ ಶಿಬಿರದಲ್ಲಿ ಭಾಗವಹಿಸುವವರು 9380389236, 9742829076 ಈ ಸನೀಹವಾಣಿಗಳಿಗೆ ಸಂಪರ್ಕಿಸಿ ಹೆಸರು ನೊಂದಾಯಿಸಬಹುದು.

# ನಗರದಲ್ಲಿ ನಾಳೆ ಹಿಮೋಫಿಲಿಯಾ 'ರೇಸ್ ಫಾರ್ 7 ಮ್ಯಾರಥಾನ್' ಕಾರ್ಯಕ್ರಮ

ದಾವಣಗೆರೆ,ಫೆ.23- ನಗರದ ಹಿಮೋಫಿಲಿಯಾ ಸಂಸ್ಥೆಯ ವತಿಯಿಂದ ನಾಡಿದ್ದು ದಿನಾಂಕ 25 ರಂದು ಬೆಳಿಗ್ಗೆ 6-30 ಗಂಟೆಗೆ 'ಅಂತಾರಾಷ್ಟ್ರೀಯ ವಿರಳ ರೋಗಗಳ ದಿನಾಚರಣೆ' ಅಂಗವಾಗಿ ನಗರದ ಪ್ರಮುಖ ರಸ್ತೆಗಳಲ್ಲಿ 'ರೇಸ್ ಫಾರ್ 7 ಮ್ಯಾರಥಾನ್' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರತಿ ವರ್ಷ ಫೆಬ್ರವರಿ ತಿಂಗಳ ಕೊನೆಯ ದಿನವನ್ನು 'ಅಂತರರಾಷ್ಟ್ರೀಯ ವಿರಳ ರೋಗಗಳ ದಿನಾಚರಣೆ'ಯಾಗಿ ಆಚರಿಸಲಾಗುತ್ತದೆ. ಪ್ರಪಂಚದಾದ್ಯಂತ ವಿರಳ ರೋಗಿಗಳು ಮತ್ತು ಅವರ ಕುಟುಂಬಗಳು ಅತ್ಯಂತ ಕ್ಲಿಷ್ಟಕರ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ವಿರಳ ಎನ್ನುವ ಒಂದೇ ಕಾರಣಕ್ಕೆ ಸಮಾಜ, ಸರ್ಕಾರ ಮತ್ತು ಸಂಘ-ಸಂಸ್ಥೆಗಳ ಗಮನ ಸೆಳೆಯುವಲ್ಲಿ ವಿಫಲವಾಗಿರುವುದು ಸರ್ವೇಸಾಮಾನ್ಯ.

ವಿರಳ ರೋಗಿಗಳ ಕ್ಷೇಮಾಭಿವೃದ್ಧಿ ಸಂಸ್ಥೆ-ಭಾರತ (ಓಆರ್‌ಡಿಐ) 2013 ರಲ್ಲಿ ಪ್ರಾರಂಭಗೊಂಡಿತು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ವೈದ್ಯಕೀಯ ಸೌಲಭ್ಯಗಳ ಅಭಿವೃದ್ಧಿ, ವೈಜ್ಞಾನಿಕ ಲೋಕದಲ್ಲಿ ಸಂಶೋಧನೆ ಮತ್ತು ಆವಿಷ್ಕಾರಗಳ ಪ್ರೋತ್ಸಾಹಗಳಿಗೋಸ್ಕರ ಫೆಬ್ರವರಿ ತಿಂಗಳ ಕೊನೆ ದಿನದಂದು ಅನೇಕ ಕಾರ್ಯಕ್ರಮ ಗಳನ್ನು ಸಂಘಟಿಸಲಾಗುತ್ತಿದೆ.

ಮೂರು ದಶಕಗಳಿಂದ ಹಿಮೋಫಿಲಿಯಾ ಮತ್ತು ಇತರೆ ವಿರಳ ರಕ್ತಸ್ರಾವ ರೋಗಿಗಳ ಕ್ಷೇಮಾಭಿವೃದ್ದಿಗಾಗಿ ಕಾರ್ಯ ನಿರ್ವಹಿಸುತ್ತಿದ್ದು, ಓಆರ್‌ಡಿಐ ನೊಂದಿಗೆ ಸಹಯೋಗ ಹೊಂದಿದೆ.

ಈ ಅಭಿಯಾನ ಯಶಸ್ವಿಗೊಳಿಸಲು ಭಾಗವಹಿಸುವವರು https://registration.ordindia.in/reg?city= davanagere. ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಬಹುದು.

## ಪರಿಷತ್‌ನಲ್ಲಿ ದತ್ತಿಗಳ ತಿದ್ದುಪಡಿ ವಿಧೇಯಕ ವಿಫಲ

ಬೆಂಗಳೂರು, ಫೆ. 23 - ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ವಿಧೇಯಕ-2024 ವಿಧಾನ ಪರಿಷತ್‌ನಲ್ಲಿ ತಿರಸ್ಕೃತಗೊಂಡಿದೆ. ಇದರಿಂದಾಗಿ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ತೀವ್ರ ಮುಖಭಂಗವಾಗಿದೆ.

ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರು ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆಯನ್ನು ವಿಧಾನ ಪರಿಷತ್‌ನಲ್ಲಿ ಮಂಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 2003ರಿಂದ ವಿಧೇಯಕ ಜಾರಿಯಲ್ಲಿದೆ. 2003ರ ಮೇ 1 ರಿಂದ ದೇವಸ್ಥಾನಗಳಿಂದ ನಿಧಿ ಸಂಗ್ರಹಿಸಲಾಗುತ್ತಿದೆ. ಈಗಿರುವ ನಿಯಮದಂತೆ ಸರ್ಕಾರಕ್ಕೆ 8 ಕೋಟಿ ರೂ. ಸಲ್ಲಿಕೆ ಆಗುತ್ತಿದೆ ಎಂದರು. ಹೊಸ ನಿಯಮದಿಂದ 60 ಕೋಟಿ ರೂಪಾಯಿ ಹಣ ಸಂಗ್ರಹ ಆಗುತ್ತದೆ. ಸಿ ದರ್ಜೆಯ ದೇಗುಲಗಳನ್ನು ನಿರ್ವಹಿಸಲು ಇದರಿಂದ ಸಾಧ್ಯವಾಗುತ್ತದೆ ಎಂದರು.

ವಿಧೇಯಕದಲ್ಲಿದ್ದ ತಿದ್ದುಪಡಿ ಅಂಶಗಳಿಗೆ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ತೀವ್ರ ಆಕ್ಷೇಪ ಮತ್ತು ವಿರೋಧವನ್ನು ವ್ಯಕ್ತಪಡಿಸಿದರು.

ಪರ-ವಿರೋಧದ ಚರ್ಚೆಯ ಬಳಿಕ ಉಪ ಸಭಾಪತಿ ಪ್ರಾಣೇಶ್ ಅವರು ತಿದ್ದುಪಡಿ ವಿಧೇಯಕವನ್ನು ಧ್ವನಿ ಮತಕ್ಕೆ ಹಾಕಿದರು. ವಿಧೇಯಕದ ಪರವಾಗಿ ಏಳು ಮತಗಳು ಚಲಾವಣೆಯಾದರೆ, ವಿಧೇಯಕದ ವಿರುದ್ಧವಾಗಿ 18 ಮತಗಳು ಚಲಾವಣೆಯಾದವು. ಇದರೊಂದಿಗೆ ಮಸೂದೆ ಅಂಗೀಕಾರ ಪಡೆಯಲು ವಿಫಲವಾಯಿತು.

ನಂತರ ಪ್ರತಿಪಕ್ಷ ಬಿಜೆಪಿ ಸದಸ್ಯರು ಜೈ ಶ್ರೀರಾಮ ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯರು ಭಾರತ್ ಮಾತಾ ಕಿ ಜೈ ಹಾಗೂ ಜೈ ಭೀಮ್ ಎಂದು ಘೋಷಣೆ ಕೂಗಿದರು.

# ತೋಟಗಳಿಗೆ ಸಿಗದ ಭದ್ರಾ ನೀರು ಮಲೇಬೆನ್ನೂರಿನಲ್ಲಿ ರೈತರ ಆಕ್ರೋಶ



ಮಲೇಬೆನ್ನೂರು, ಫೆ.23- ಭದ್ರಾ ಅಚ್ಚುಕಟ್ಟಿನ ಮಲೇಬೆನ್ನೂರಿನ ಕೆಳಭಾಗದಲ್ಲಿರುವ ಜಿಗಳಿ, ಯಲವಟ್ಟಿ, ಸಿರಿಗೆರೆ, ಕೆ.ಎನ್.ಹಳ್ಳಿ, ಕೊಕ್ಕನೂರು, ಹಳ್ಳಿಹಾಳ್, ಭಾನುವಳ್ಳಿ, ನಂದಿತಾವರೆಗಳಿಗೆ ಇದುವರೆಗೂ ಭದ್ರಾ ಕಾಲುವೆ ನೀರು ತಲುಪಿಲ್ಲ ಎಂದು ರೈತರು ಶುಕ್ರವಾರ ಆಕ್ರೋಶ ವ್ಯಕ್ತಪಡಿಸಿದರು.

ಮಲೇಬೆನ್ನೂರಿನಲ್ಲಿರುವ ನೀರಾವರಿ ಕಚೇರಿಗೆ ಆಗಮಿಸಿದ್ದ ನೂರಾರು ರೈತರು, ಕೆಳಭಾಗಕ್ಕೆ ನೀರು ಬರುತ್ತಿಲ್ಲ. ಮೇಲ್ಭಾಗದ ರೈತರು ತೋಟ-ಗದ್ದೆಗಳಿಗೆ ನೀರು ತುಂಬಿಸಿಕೊಳ್ಳುತ್ತಿದ್ದಾರೆ. ಇಂಜಿನಿಯರ್‌ಗಳು ಸರಿಯಾಗಿ ನೀರಿನ ನಿರ್ವಹಣೆ ಮಾಡುತ್ತಿಲ್ಲ. ಪಂಪ್‌ಸೆಟ್‌ಗಳ ತೆರವು ಕಾರ್ಯಾಚರಣೆಯನ್ನು ಕಾಟಚಾರಕ್ಕೆ ಮಾಡಿದ್ದಾರೆಂದು ರೈತರು ದೂರಿದರು.

ಈ ವೇಳೆ ಹಾಜರಿದ್ದ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ಭದ್ರಾ ಎಸ್‌ಇ ಸುಜಾತ ಅವರೊಂದಿಗೆ ಮಾತನಾಡಿ, ಕೆಳಭಾಗಕ್ಕೆ ಬರಬೇಕಾದ ನೀರಿನ ಪ್ರಮಾಣ ತೋರಿಸಿಕೊಡಿ ಬನ್ನಿ ಎಂದರು.

ಕೊಮಾರನಹಳ್ಳಿ ಬಳಿ ಭದ್ರಾ ನಾಲೆಯಲ್ಲಿ ನೀರಿನ ಪ್ರಮಾಣ ಬಹಳ ಕಡಿಮೆ ಇರುವುದರಿಂದ ಕೆಳಭಾಗಕ್ಕೆ ನೀರು ಹೋಗುತ್ತಿಲ್ಲ. ತೋಟಗಳು ನೀರಿಲ್ಲದೇ ಒಣಗುತ್ತಿವೆ ಎಂದು ಶ್ರೀನಿವಾಸ್ ಅವರು ಇಂಜಿನಿಯರ್‌ಗಳಿಗೆ ಹೇಳಿದರು.

ದೇವರಬೆಳಕೆರೆ ಪಿಕಪ್ ಡ್ಯಾಂನಿಂದ ಬ್ಯಾಲದಹಳ್ಳಿ ಹಳ್ಳಕ್ಕೆ ನೀರು ಬಿಡುವಂತೆ ಇದೇ ವೇಳೆ ಭಾನುವಳ್ಳಿ, ಬೆಳ್ಳೂಡಿ, ಬ್ಯಾಲದಹಳ್ಳಿ, ಎಕ್ಕೆಗೊಂದಿ ರೈತರು ಎಇಇ ಧನಂಜಯ ಅವರನ್ನು ಒತ್ತಾಯಿಸಿದಾಗ ನಂದಿಗಾವಿ ಶ್ರೀನಿವಾಸ್ ಕೂಡಾ ನೀರು ಬಿಡುವಂತೆ ರೈತರ ಪರವಾಗಿ ಹೇಳಿದರು.

ಎಇಇ ಧನಂಜಯ ಮಾತನಾಡಿ, ಅಚ್ಚುಕಟ್ಟಿನ ಎಲ್ಲಾ ತೋಟಗಳಿಗೆ ನೀರು ಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಬೇಕಾಗಿದ್ದಾರೆ
ರವಿತೇಜ ಟೆಕ್ಸ್‌ಟೈಲ್ಸ್
ಅಂಗಡಿಯಲ್ಲಿ ಅನುಭವವುಳ್ಳ ಸೇಲ್ಸ್ ಮೆನ್, ಸೇಲ್ಸ್ ಗರ್ಲ್ಸ್ ಕೆಲಸ ಮಾಡಲು ಬೇಕಾಗಿದ್ದಾರೆ.
89703 23033

## ದಾವಣಗೆರೆ ತಾಲ್ಲೂಕು 10ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಾರ್ಚ್ 5ಕ್ಕೆ ಮುಂದೂಡಿಕೆ

ದಾವಣಗೆರೆ, ಫೆ. 23- ಇಲ್ಲಿಗೆ ಸಮೀಪದ ಹೆಬ್ಬಾಳು ಗ್ರಾಮದ ಶ್ರೀ ಮಹಾಂತ ರುದ್ರೇಶ್ವರ ವಿರಕ್ತ ಮಠದಲ್ಲಿ ಇದೇ ದಿನಾಂಕ 27ರ ಮಂಗಳವಾರ ನಡೆಯಲುದ್ದೇಶಿಸಿದ್ದ ಹತ್ತನೇ ದಾವಣಗೆರೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದ್ದು, ಸದರಿ ಸಮ್ಮೇಳನವನ್ನು ಬರುವ ಮಾರ್ಚ್ 5ರ ಮಂಗಳವಾರ ದಾವಣಗೆರೆ ತಾಲ್ಲೂಕು ಹೆಬ್ಬಾಳು ಗ್ರಾಮದ ಶ್ರೀ ಮಹಾಂತ ರುದ್ರೇಶ್ವರ ವಿರಕ್ತ ಮಠದಲ್ಲಿ ನಡೆಸಲಾಗುವುದು ಎಂದು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ತಿಳಿಸಿದ್ದಾರೆ.

### ಲೋಕಸಭಾ ಚುನಾವಣೆ: ಡಿಬಿಗೆ ಉಸ್ತುವಾರಿ



ದಾವಣಗೆರೆ, ಫೆ.23- ಮುಂಬರುವ ಲೋಕಸಭಾ ಚುನಾವಣೆಗೆ ಬೂತ್ ಮಟ್ಟದ ಏಜೆಂಟರ ನೇಮಕಾತಿಯ ಜಿಲ್ಲಾ ಉಸ್ತುವಾರಿಯನ್ನಾಗಿ ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಅವರನ್ನು ನೇಮಕ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ. ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

### ಆಹಾರ ಚಿಕಿತ್ಸೆ : ಇಂದು ಉಪನ್ಯಾಸ

ಭಾರತ ವಿಕಾಸ ಪರಿಷದ್ ಸ್ವಾಮಿ ವಿವೇಕಾನಂದ ಶಾಖೆ ವತಿಯಿಂದ ಇಂದು ಸಂಜೆ 6 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ 'ಆಹಾರ ಚಿಕಿತ್ಸೆ' ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕೋಲಾರದ ಜೀವ ಸಂಜೀವನ ನ್ಯಾಚುರಲ್ ಲೈಫ್ ಸಂಸ್ಥೆಯ ಸಂಸ್ಥಾಪಕರೂ, ಆಹಾರ ತಜ್ಞರೂ ಆದ ಆರ್.ರಾಜಶೇಖರ್ ಅವರು, 'ಕ್ರಮಬದ್ಧ ಆಹಾರ ಮತ್ತು ಜೀವನ ಶೈಲಿಯಿಂದ ಯಾವುದೇ ಔಷಧಿಗಳಿಲ್ಲದೇ ಕಾಯಿಲೆ ರಹಿತ ಜೀವನ ಸಾಧ್ಯ' ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಶಾಖೆಯ ಅಧ್ಯಕ್ಷ ಎಲ್.ವಿ.ನಾಗಾನಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಶಾಖೆಯ ಕಾರ್ಯದರ್ಶಿ ಕೆ.ಶಿವಶಂಕರ್ ತಿಳಿಸಿದ್ದಾರೆ.

### ಬಿಎಸ್ಸೆನ್ನೆಲ್ : ತಾಮ್ರದ ಮಾಧ್ಯಮದಿಂದ ಫೈಬರ್‌ಗೆ ಪರಿವರ್ತನೆ

ದಾವಣಗೆರೆ, ಫೆ.23- ಸರ್ಕಾರದ ಆದೇಶದೊಂದಿಗೆ, ಸರ್ಕಾರಿ ಕಂಪನಿ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು, ಸಾರ್ವಜನಿಕರಿಗೆ ಆಯ್ಕೆ ಮಾಡಲು, ಟೆಲಿಕಾಂ ವಲಯದಲ್ಲಿ ಆರೋಗ್ಯಕರ ಸ್ಪರ್ಧೆಯನ್ನು ನಿರ್ವಹಿಸಲು ಮತ್ತು ಏಕಸ್ವಾಮ್ಯದ ಶಕ್ತಿಗಳನ್ನು ದೂರವಿರಿಸಲು ಆತ್ಮನಿರ್ಭರ ಭಾರತ ಮಿಷನ್ ಅಡಿಯಲ್ಲಿ ಸ್ಥಳೀಯವಾಗಿ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನಗಳಿಂದ ಚಾಲಿತವಾಗಿರುವ 4ಜಿ / 5ಜಿ ತಂತ್ರಜ್ಞಾನದ ಪ್ರಸರಣ ವ್ಯವಸ್ಥೆಯನ್ನು ಬಳಸಿಕೊಂಡು, ನಮ್ಮ ಗ್ರಾಹಕರಿಗೆ ಉತ್ತಮ ಟೆಲಿಕಾಂ ಕವರೇಜ್ ಮತ್ತು ಅಡೆತಡೆಯಿಲ್ಲದ ಸುಧಾರಿತ ಮೊಬೈಲ್ ಸೇವೆಗಳನ್ನು ಒದಗಿಸುವ ಹಿತದೃಷ್ಟಿಯಿಂದ ಬಿಎಸ್ಸೆನ್ನೆಲ್ ನೆಟ್‌ವರ್ಕ್‌ನಲ್ಲಿ ಗಣನೀಯ ಸುಧಾರಣೆ ತರಲು ಮತ್ತು ಅಸ್ತಿತ್ವದಲ್ಲಿರುವ ವೈರ್‌ಲೈನ್ ಸಂಪರ್ಕಗಳನ್ನು ತಾಮ್ರದ ಮಾಧ್ಯಮದಿಂದ ಫೈಬರ್ ಮಾಧ್ಯಮದ ಮೂಲಕ ಎಫ್.ಟಿ.ಟಿ. ಗೆ ಪರಿವರ್ತಿಸುವುದಕ್ಕೆ ಸೇರಿದಂತೆ ಉನ್ನತ ದರ್ಜೆಯ ಕೆಲಸವನ್ನು ಮಾಡಲಾಗುತ್ತಿದೆ ಎಂದು ದಾವಣಗೆರೆ ಬಿ.ಎಸ್.ಎನ್.ಎಲ್ ತಿಳಿಸಿದೆ.

ಜಾತ್ರೆ ಪ್ರಯುಕ್ತ
ತೂಕದ ಲೆಕ್ಕದ ಬಟ್ಟೆ ಅಂಗಡಿ
ಈಗ ಬಟ್ಟೆಗಳು ಒಂದು ಕಿಲೋಗೆ ಕೇವಲ
900/-, 500/ರೂ.
ಡಿಸ್ಕೌಂಟ್

ಸಂಸ್ಮರಣೆ




ವಿನಯ್ ರಾಜ್ ಎಸ್.ಬಿ.
21.11.1983 - 17.02.2024

ನಮ್ಮೆಲ್ಲರ ಪ್ರೀತಿ ಪಾತ್ರನಾದ ಶ್ರೀ ವಿನಯ್ ರಾಜ್ ಎಸ್.ಬಿ ಇವರು ದಿ. 17.02.2024ರಂದು ಲಿಂಗೈಕ್ಯರಾದ ಪ್ರಯುಕ್ತ ತತ್ಸಂಬಂಧ ಸಂಸ್ಮರಣೆ ಕಾರ್ಯಕ್ರಮವನ್ನು ದಿನಾಂಕ 25.02.2024ರ ಭಾನುವಾರ ಮಧ್ಯಾಹ್ನ 12.30ಕ್ಕೆ ನೆರವೇರಿಸಲಾಗುವುದು. ಆತ್ಮೀಯರಾದ ತಾವುಗಳು ಆಗಮಿಸಿ ಅಗಲಿರುವ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ತಮ್ಮಲ್ಲಿ ವಿನಂತಿಸುತ್ತೇವೆ.

ಸ್ಥಳ : ಶ್ರೀ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ ತಾವೆಗಳಲ್ಲರೂ ಪಾಲ್ಗೊಳಬೇಕಾಗಿ ವಿನಂತಿ.

ದಿ. ಬಸವರಾಜಪ್ಪ ಎಂ. ಮತ್ತು ಶ್ರೀಮತಿ ರಾಜೇಶ್ವರಿ ಶ್ರೀಮತಿ ಚೇತನ ಎಲ್. ಎನ್, ಅದ್ವಿಕ್ ಎಸ್.ವಿ. ಕುಟುಂಬ ವರ್ಗ ಹಾಗೂ ಬಂಧು-ಬಳಗ.

ಭಾವಪೂರ್ಣ ಶ್ರದ್ಧಾಂಜಲಿ



ಹಲವಾರು ವರ್ಷಗಳ ಕಾಲ ನಮ್ಮ ಸುಕ್ಷೇಮ ಆಸ್ಪತ್ರೆಯಲ್ಲಿ ಪ್ರಧಾನ ವೈದ್ಯರಾಗಿ ಸೇವೆ ಸಲ್ಲಿಸಿದ

ಡಾ|| ಶಶಿಧರ ಆರ್. ಮುರಳೀಹಳ್ಳಿ

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ...

*ನಮ್ಮ ಮಾರ್ಗದರ್ಶಕರಾಗಿದ್ದ ಇವರ ನೆನಪು ನಮ್ಮ ಹೃದಯದಲ್ಲಿ ಎಂದೆಂದಿಗೂ ಬೆಳಗುತ್ತದೆ. ಇವರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ...*

SUKSHEMA HOSPITAL

ಸುಕ್ಷೇಮ ಆಸ್ಪತ್ರೆ ಸಿಬ್ಬಂದಿ ವರ್ಗ

## ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷೀದಾರರಾದ ಶ್ರೀ ಹೇಮಂತ್. ಆರ್. ಡಿ. ಬಿನ್ ಧರ್ಮನಾಯ್ಕ ವಾಸ; ರೇಖಲಗೆರೆ ಲಂಬಾಣಿ ಹಟ್ಟಿ, ಚಳ್ಳಕೆರೆ ತಾ||, ಇವರು ನೀಡಿದ ಮಾಹಿತಿ ಮೇರೆಗೆ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರ ಬಯಸುವ ಸಂಗತಿಗಳು ಏನೆಂದರೆ.

ಸದರಿಯವರ ತಂದೆ ಶ್ರೀ ಧರ್ಮನಾಯ್ಕ ಇವರು ದಿನಾಂಕ 01-06-2021 ರಂದು ಮೃತರಾಗಿದ್ದು, ತಾನು, ತನ್ನ ತಾಯಿ ಶ್ರೀಮತಿ ಪ್ರತಿಭ, ತಮ್ಮ ಶ್ರೀ ಸುಮಂತ್ ಹಾಗೂ ಸಹೋದರು ಶ್ರೀಮತಿ ಕುಮದ್ವತಿ ಇವರುಗಳು ಮೃತ ಶ್ರೀ ಧರ್ಮನಾಯ್ಕ ಇವರ ವಾರಸುದಾರರಾಗಿದ್ದು ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳಲ್ಲಿ ತಮಗೆ ಮತ್ತು ಈ ಮೇಲೆ ಹೇಳಿದ ವ್ಯಕ್ತಿಗಳಿಗೆ ಸಮಾನದ ಹಕ್ಕು ಮತ್ತು ಹಿಸ್ಸಾ ಇದ್ದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತಾವು ಘನ ನ್ಯಾಯಾಲದಲ್ಲಿ ಕಾನೂನು ಪ್ರಕ್ರಿಯೆ ಆರಂಭಿಸಿದ್ದು, ಸದರಿ ಉದ್ದೇಶಿತ ಪ್ರಕರಣದಲ್ಲಿ ಷೆಡ್ಯೂಲ್ ಸ್ವತ್ತುಗಳ ವಹಿವಾಟಿಗೆ ಸಂಬಂಧಿಸಿದಂತೆ ನಿರ್ಬಂಧಕಾಜ್ಞೆ ಆದೇಶ ಸಹ ಪಡೆಯುವ ಉದ್ದೇಶ ಹೊಂದಿರುತ್ತಾರೆ.

ವಾಸ್ತವತೆ ಹೀಗಿರುವಾಗ್ಗೆ, ಮೇಲೆ ಹೇಳಿದ ಶ್ರೀಮತಿ ಕುಮದ್ವತಿ ಮತ್ತು ಅವರ ಗಂಡ ಶ್ರೀ ಸುರೇಶ್ ಇವರು ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕೆಲ ಸೃಷ್ಟಿತ ದಾಖಲೆಗಳನ್ನು ಬಳಸಿ, ಖಾಸಗಿ ವ್ಯಕ್ತಿಗಳೊಂದಿಗೆ ಹಾಗೂ ಬ್ಯಾಂಕ್ (ಹಣಕಾಸು ಸಂಸ್ಥೆಗಳೊಂದಿಗೆ) ವಹಿವಾಟು ನಡೆಸಲು ಪ್ರಯತ್ನಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಹಾಗೂ ಬ್ಯಾಂಕ್ (ಹಣಕಾಸು ಸಂಸ್ಥೆ)ಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್ ಸೊತ್ತುಗಳಿಗೆ ಸಂಬಂಧಿಸಿದಂತೆ ಯಾರೂ ಮೇಲೆ ಹೇಳಿದ ಶ್ರೀಮತಿ ಕುಮದ್ವತಿ ಮತ್ತು ಅವರ ಗಂಡ ಶ್ರೀ ಸುರೇಶ್ ಇವರುಗಳೊಂದಿಗೆ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು. ಈ ಸಾರ್ವಜನಿಕ ಸೂಚನೆಯ ಹೊರತಾಗಿಯೂ ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಅದು ಅಸಿಂಧುವಾಗುತ್ತದೆಯಲ್ಲದೆ, ನನ್ನ ಕಕ್ಷಿದಾರರಿಗೆ ಹಾಗೂ ಅವರಿಗೆ ಷೆಡ್ಯೂಲ್ ಆಸ್ತಿಗಳಲ್ಲಿನ ಇರತಕ್ಕ ಹಕ್ಕಿಗೆ ಸದರಿ ವ್ಯವಹಾರ ಯಾವುದೇ ರೀತಿಯಲ್ಲಿ ಬಾಧಕವಾಗುವುದಿಲ್ಲ ಹಾಗೂ ಅಂತಹ ವ್ಯವಹಾರ ಕಾನೂನಿನಡಿಯಲ್ಲಿ ಊರ್ಜಿತವಾಗತಕ್ಕದ್ದಲ್ಲ.

### ಪರಿಶಿಷ್ಟ ಸ್ವತ್ತುಗಳ ವಿವರ

1. ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟು ದಾವಣಗೆರೆ ಸಿಟಿ, ಶ್ರೀನಿವಾಸ ನಗರದ, 6ನೇ ಅಡ್ಡರಸ್ತೆಯಲ್ಲಿ ಬರತಕ್ಕ ಡೋರ್ ನಂ. 1674/22, ಇದರ ಅಳತೆ 52+72x57/2 ಅಡಿ ಮತ್ತು 13+0x57/2 ಅಡಿ ಉಳ್ಳ ಜಾಗ ಮತ್ತು ಸದರಿ ಜಾಗೆಯಲ್ಲಿ ಕಟ್ಟಿರುವ ಕಟ್ಟಡ ಇದ್ದು ಸದರಿ ಸ್ವತ್ತಿಗೆ ಚಕ್ಕುಬಂದಿ:

**ಪೂರ್ವ** : ಶ್ರೀ ತಿಪ್ಪೇಶ್ ಇವರ ಸ್ವತ್ತು,
**ಪಶ್ಚಿಮ** : ಖಾಲಿ ಜಾಗ,
**ಉತ್ತರ** : ರಸ್ತೆ,
**ದಕ್ಷಿಣ** : 2 ಅಡಿ ಪ್ಯಾಸೇಜ್ ಮತ್ತು ಅಜ್ಜಪ್ಪ ಇವರ ಸ್ವತ್ತು.

2. ಚಳ್ಳಕೆರೆ ತಾ|| ರೇಖಲಗೆರೆ ಲಂಬಾಣಿ ಹಟ್ಟಿ ಗ್ರಾಮದ ಖಾತೆ ನಂ. 8, ಅಳತೆ 85x62 ಅಡಿ ಉಳ್ಳ ಜಾಗೆ ಮತ್ತು ಸದರಿ ಜಾಗೆಯಲ್ಲಿ ಕಟ್ಟಿರುವ ಮನೆ ಇದ್ದು ಸದರಿ ಸ್ವತ್ತಿಗೆ ಚಕ್ಕುಬಂದಿ :

**ಪೂರ್ವ** : ರಸ್ತೆ,
**ಪಶ್ಚಿಮ** : ರಿ.ಸ. ನಂ. 31/3ರ ಜಮೀನು,
**ಉತ್ತರ** : ಈರನಾಯ್ಕ ಇವರ ಸ್ವತ್ತು.
**ದಕ್ಷಿಣ** : ರಾಮಚಂದ್ರ ನಾಯ್ಕ ಮತ್ತು ಸಾವಿತ್ರಮ್ಮ ಇವರ ಸ್ವತ್ತು.

ಕೆ.ಜಿ.ಕೆ. ಸ್ವಾಮಿ,
ಎಸ್.ಜಿ. ಮಹಾವೀರ್,
ನ್ಯಾಯವಾದಿಗಳು, **ಲಾ ಸಲ್ಯೂಷನ್ಸ್'** ನಂ. 417/4ಎ , 4ಬಿ, 1ನೇ ಮಹಡಿ, ಬೆನಕೇಶ್ ಪ್ಲಾಜಾ, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ,
Email :swamykgk@gmail.com, ಮೊ : 98444 13266, 98450 03326